(SRI. DEVARAJ URS)

(1) Flying of personal flags ;
(2) Use of Red Number Plates on Motor Cars ;
(3) Gun Salutes on ceremonial occasions ;
(4) Fishing and shooting ;
(5) Exemption from the provisions of the Indian Arms Act, 1959.
(6) Exemption from payment of Motor Vehicle Taxes ;
(7) Exemption from payment of local taxes ;
(8) Free Medical attendance at Government Hospitals.

(*c*) In respect of the three Palaces, one each at Bangalore, Mysore and Ooty, the water and electricity charges were being met by the State Government. No provision for such payment has been made in the Budget for the year, 1972-73.

(*d*) State Government have agreed to the suggestion of the Government of India to remove the inalienability clause and permit the Ex-Maharaja of Mysore to alienate the Palaces at Bangalore Mysore and Ooty, with a suggestion that the Mysore Palace, might be alienated in favour of a Trust and the Management transferred to the Government for maintaining the Palace as a show piece and treasure house of art.

CALLING ATTENTION TO MATTERS OF URGENT PUBLIC IMPORTANCE

(*i*) *Re : Counting of Period of service of 300 employees of H.E.C.P. who were transferred to M.S.E.B. and M.P.C.*

ಶ್ರೀ ಕಾಗೋಡು ತಿಮ್ಮಪ್ಪ(ಸಾಗರ).— ಜಲವಿದ್ಯುತ್ ನಿರ್ಮಾಣ ಯೋಜನೆಯಿಂದ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಗೆ ಹಾಗೂ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನಾ ಸಂಸ್ಥೆಯವರಿಗೆ ವರ್ಗಾಯಿಸಲಾದ ೩೦೦ ಮಂದಿ ನೌಕರರುಗಳ ಸೇವಾವಧಿಯನ್ನು ಪರಿಗಣಿಸುವ ವಿಚಾರದಲ್ಲಿ ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಈ ಹಿಂದೆ ರಾಜ್ಯದ ಹೈಡ್ರೋ ಎಲೆಕ್ಟ್ರಿಕ್ ಕನ್‌ಸ್ಟ್ರಕ್ಷನ್ ಪ್ರಾಜೆಕ್ಟ್ (ಹೆಚ್.ಇ.ಸಿ.ಪಿ.)ನಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೩೦೦ಕ್ಕೂ ಹೆಚ್ಚು ಜನ ಎಲ್ಲ ವರ್ಗದ ನೌಕರರನ್ನು ಹಾಲಿ ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಳಿ ಮತ್ತು ಮೈಸೂರು ರಾಜ್ಯದ ಪವರ್ ಕಾರ್ಪೊರೇಷನ್ (ಎಂ.ಪಿ.ಸಿ.) ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಆದರೆ ಸದರಿ ನೌಕರರು ಹೆಚ್.ಇ.ಸಿ.ಪಿ.ಯಲ್ಲಿ ಸಲ್ಲಿಸಿದ ಸೇವಾವಧಿಯನ್ನು ಎಂ.ಪಿ.ಸಿ.ಯಲ್ಲಿ ಮತ್ತು ಎಂ.ಎಸ್.ಇ.ಬಿ.ಯಲ್ಲಿ ಹಾಲಿ ಸೇರಿಸಿ ಕೊಟ್ಟಿಲ್ಲ. ಅಲ್ಲದೆ, ಎಂ.ಪಿ.ಸಿ. ಸಂಸ್ಥೆಯು ಒಂದು ತಾತ್ಕಾಲಿಕ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಗೆ ವರ್ಗಾಯಿಸಿದ ನೌಕರರಿಗೆ ಒಂದು ಮಾತ್ರ ಸಂಸ್ಥೆಯನ್ನು ತೋರಿಸಬೇಕಾಗಿದೆ. ಈ ರೀತಿಯಲ್ಲಿ ಹೆಚ್.ಇ.ಸಿ.ಪಿ.ಯಲ್ಲಿ ಸೇವೆ ಸಲ್ಲಿದ ನೌಕರರ ಸೇವಾವಧಿಯನ್ನು ಸೇರಿಸಿ ಕೊಡುವ ಬಗ್ಗೆ ಮತ್ತು ಎಂ.ಪಿ.ಸಿ. ಸಂಸ್ಥೆಗೆ ವರ್ಗಾಯಿಸಿದ ನೌಕರರಿಗೆ ಮಾತ್ರ ಸಂಸ್ಥೆ ತೋರಿಸುವ ಬಗ್ಗೆಯೂ ಸಹ ನೌಕರರು ಮನವಿ ಸಲ್ಲಿಸಿದರೂ ಈವರೆಗೂ ಸರ್ಕಾರ ಯಾವುದೇ ತೀರ್ಮಾನ ಮಾಡಿಲ್ಲ. ಇದರಿಂದ ನೌಕರರು ವಿವಂಚನೆಗೆ ಒಳಗಾಗಿ, ತೀರಾ ಶೋಚನೀಯ ಸ್ಥಿತಿಯಲ್ಲಿದ್ದಾರೆ. ಆದ್ದುದರಿಂದ ಇದು ಸಾರ್ವಜನಿಕ ದೃಷ್ಟಿಯಿಂದ ಪ್ರಮುಖ ವಿಷಯವಾಗಿದೆ. ಪ್ರಯುಕ್ತ ಈ ಮೇಲ್ಕಂಡ ವಿಷಯದಲ್ಲಿ ಲೋಕೋಪಯೋಗಿ ಮಂತ್ರಿಗಳು ಹೇಳಿಕೆ ನೀಡುವಂತೆ ನಾನು ಮನವಿ ಮಾಡಿಕೊಳ್ಳುತ್ತೇನೆ.

SRI H. M. CHANNABASAPPA (Minister for Public Works and Electricity).— I stateas follows:—

Consequent on the decision of Government to transfer the Sharavathi Valley Hydro-Electric Project and the Bhadra Hydro-Electric Project to the Mysore Power Corporation, it was *inter-alia*, directed by Government that the Hydro Electric Construction Pr ject Organisation, which was till then incharge of these Projects should be disbanded and its personnel deputed to Mysore Power Corporation except those, engaged in operation and maintenance of both the Projects. The Hydro Electric Construction Project Organisation consisted of persons deputed from the Mysore State Electricity Board and from Public Works Department and those locally recruited by that Organisation and in the case of the staff deputed from the Mysore State Electricity Board it was directed that this staff should stand repatriated to the Board from the date of winding up of that Organisation *i.e.*, from 27th March 1971.

In pursuaace of the above directions of Government the staff on deputation to that department from other departments of Government and who have been deputed to the Mysore Power Corporation hold liens in their parent departments, while those locally recruited by the Hydro Electric Construction Project Organisation do not hold lie s in any Department of Government. The latter staff, who are now transferred to the Mysore Power Corporation have represented to Government that benefit be given for their past service in the erstwhile Hydro Electric Construction Project Department and also for keeping their liens in permanent departments of Government. This question is under active consideration of Government with reference to the Mysore Civil Services Rules and decision will be taken as early as possible.

ಶ್ರೀ ಕಾಗೋಡು ತಿಮ್ಮಪ್ಪ:—ಇದರಲ್ಲಿ ನೇರವಾಗಿ ಹಿಂದೆ ಎಚ್‌ಇಪಿಪಿ ಯಾರನ್ನು ನೇಮಕ ಮಾಡಿದ್ದರೋ ಅವರನ್ನು ಎಂಪಿಸಿಗೆ ವರ್ಗಾಯಿಸಿದ್ದಾರೆ. ಹಂಗಾಮಿಯಾಗಿ ಇರತಕ್ಕೆ ಸಂಸ್ಥೆಗೆ ಪುನಃ ಹಿಂದೆ ಎಚ್‌ಇಪಿಪಿ ಯಲ್ಲಿ ಕೆಲಸಮಾಡುತ್ತಾ ಇದ್ದ ಜನರನ್ನು ವರ್ಗಾಯಿಸಿರುತ್ತೆ. ಎಂಪಿಸಿ ರದ್ದು ಮಾಡಿದ ಸಂದರ್ಭದಲ್ಲಿ ಎಚ್‌ಇಪಿಪಿ ನೇರವಾಗಿ ನೇಮಕ ಮಾಡಿಕೊಂಡಿದ್ದರೂ ಅವರಿಗೆ ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ ಏನಾದರೂ ಪರಿಹಾರವನ್ನು ತೋರಿಸಿಕೊಡುತ್ತಿರಾ ? ಜೊತೆಗೆ ಎಚ್‌ಇಪಿಪಿ ನಲ್ಲಿ ಕೆಲಸ ಮಾಡುತ್ತಿದ್ದಾಗ ಸರ್ಕಾರಿ ಸ್ಕೇಲ್ ಪ್ರಕಾರ ಸಂಬಳ ಪಡೆಯುತ್ತಿದ್ದರು. ಮೈಸೂರು ಪವರ್ ಕಾರ್ಪೊರೇಷನ್‌ಗೆ ಹೋದ ಮೇಲೆ ನೌಕರರ ಪರಿಸ್ಥಿತಿ ಏನಾಗಿದೆ ಎಂದರೆ ಅವರಿಗೆ ಡೆಪ್ಯುಟೇಷನ್ ಅಲೋಯೆನ್ಸ್ ಕೊಡುತ್ತಾ ಇಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ಫಸ್ಟ್ ಡಿವಿಜನ್‌ಗೆ ೧೬೦—೨೯೦, ಸೆಕೆಂಡ್ ಡಿವಿಜನ್‌ಗೆ ೧೩೦—೨೫೫ ಆಟೆಂಡರ್‌ಗೆ ೮೦ ೧೪೦ ಇದ್ದರೆ ಅವರಿಗೆ ಎಂಪಿಸಿಯವರು ೭೫—೧೦೦ ತೆಗೆದು ಕೊಳ್ಳಿರಿ ಎಂದು ಹೇಳುತ್ತಿದ್ದಾರೆ. ಹಿಂದೆ ಹೆಚ್ಚು ಸಂಬಳ ಪಡೆಯುತ್ತಿದ್ದವರು ಎಂಪಿಸಿಯಲ್ಲಿ ಕಮ್ಮಿ ಸಂಬಳ ತೆಗೆದುಕೊಳ್ಳಬೇಕು ಎಂದು ಒತ್ತಾಯ ಪಡಿಸುತ್ತಾ ಇರುತ್ತಾರೆ ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ:—ಎಚ್‌ಇಪಿಪಿ ಬೋರ್ಡ್ ಕೆಲಸ ಮಾಡುತ್ತಾ ಇರುವ ಕಾಲದಲ್ಲಿ ವಿವಿಧ ತರಹ ಎಂಪ್ಲಾಯೀಸ್ ಇದ್ದರು. ಎಂಎಸ್‌ಇಬಿ ಯಿಂದ ಡೆಪ್ಯುಟೇಷನ್ ಹೋಗಿದ್ದವರು, ಪಿಡಬ್ಲ್ಯೂಡಿ ಯಿಂದ ಡೆಪುಟೇಷನ್ ಹೋಗಿದ್ದವರು, ಮೂರನೇ ಕ್ಲಾಸ್ ಲೋಕಲ್ ಕ್ಯಾಂಡಿಡೇಟ್ಸ್, ಆಗಿ ರಿಕ್ರೂಟ್‌ಮೆಂಟ್ ಮಾಡಿಕೊಂಡಿದ್ದವರೂ. ಈ ಮೂರು ಕ್ಲಾಸಿನಲ್ಲಿ ಏಚ್‌ಇಪಿಪಿ ಅಭಾಲಿಷ್ ಆದಮೇಲೆ ಎಂಎಸ್ ಇಬಿಗೆ ಹೋಗಬೇಕಾದವರು ಅಲ್ಲಿಗೆ ಹೋದರು, ಪಬ್ಲಿಕ್‌ವರ್ಕ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕಾದ

ಶ್ರೀ ಎಚ್.ಎಂ. ಚನ್ನಬಸಪ್ಪ

ವರು ಅಲ್ಲಿಗೆ ಹೋದರು. ಬೇರೆ ಡಿಪಾರ್ಟ್‌ಮೆಂಟ್‌ನಿಂದ ಬರದವರು ಅಲ್ಲಿಗೆ ಹೋದರು ಲೋಕಲ್ ಕ್ಯಾಂಡಿಡೇಟ್ಸ್ ಏನು ಇದ್ದಾರೆ ಅವರು ಎಂಪಿಸಿಗೆ ಟ್ರಾನ್ಸ್‌ಫರ್ ಆಗಿ ಬಂದಿದ್ದಾರೆ. ೧೮ನೇ ಜೂನ್ ೧೯೭೭ಕ್ಕೆ ಜೋಗ್‌ಗೆ ಹೋದ ಕಾಲದಲ್ಲಿ ಎಲ್ಲರೂ ಬಂದು ರೆಪ್ರಸೆಂಟೇಷನ್ ಕೊಟ್ಟಿದ್ದಾರೆ. ಅವರೆಲ್ಲ ಹಿಂದೆ ಏನು ಏನು ಸರ್ವೀಸ್ ಮಾಡಿದ್ದಾರೆ ಆ ಸರ್ವೀಸಸ್ ಗಮನಕ್ಕೆ ತೆಗೆದುಕೊಳ್ಳಬೇಕು ಮುಂದೆ ನಮಗೆ ಭವಿಷ್ಯವನ್ನು ಸರಿಯಾದ ರೀತಿಯಲ್ಲಿ ರೂಪಿಸಿಕೊಳ್ಳಬೇಕು ಎಂದು ಅವರು ತಮ್ಮ ಮನವಿಯನ್ನು ಸಲ್ಲಿಸಿದ್ದಾರೆ ಅವರಿಗೆ ಅವರು ಹಿಂದೆ ಎಚ್‌ಇಪಿ ಯೊಳಗೆ ಏನೇನು ಸರ್ವೀಸ್ ಮಾಡಿದ್ದಾರೆ ಯೋಗ್ಯ ರೀತಿಯಲ್ಲಿ ಅದು ಸಲ್ಲುವಂತೆ ಮಾಡಬೇಕು, ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಅಲ್ಲಿ ಆಗಲೇ ಮ್ಯಾನೇಜಿಂಗ್ ಡೈರೆಕ್ಟರಿಗೆ ಹುಕುಂ ಕೊಟ್ಟಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್:—ಎಚ್‌ಇಪಿ ಸರ್ವೀಸ್ ಕೌಂಟ್ ಆಗಿಲ್ಲದೆ ೨೧೦-೨೦೦ ಜನ ಕ್ಯಾಷುಯಲ್ ಲೇಬರ್ ಕೆಲಸಗಾರರು ೩-೪, ೫ ವರ್ಷಗಳು ಕೆಲಸ ಮಾಡಿದ ನೌಕರರಿದ್ದಾರೆ. ಅಂಥವರನ್ನು ಕನ್‌ಫರ್ಮ್ ಮಾಡುವುದಕ್ಕೆ ಪರ್ಮನೆಂಟ್ ಆಗಿ ಎಂಪ್ಲಾಯ್ ಮಾಡುವುದಕ್ಕೆ ಎಚ್‌ಇಪಿ ಮೈಸೂರು ಪವರ್ ಕಾರ್ಪೊರೇಷನ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ:—ನೇರವಾಗಿ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕವಾಗಿರುವವರ ಪ್ರಶ್ನೆಯನ್ನು ಶ್ರೀ ಕಾಗೋಡು ತಿಮ್ಮಪ್ಪನವರು ಎತ್ತಿದ್ದಾರೆ. ಅದರ ಬಗ್ಗೆ ಸೂಕ್ತ ಉತ್ತರ ಕೊಟ್ಟಿದ್ದೇನೆ. ತಾವು ಹೇಳುವ ಪ್ರಶ್ನೆ ಭಿನ್ನವಾದುದು.

ಶ್ರೀ ಎಂ. ಎಸ್. ಕೃಷ್ಣನ್:—ಇದು ನೌಕರರ ವಿಷಯ. ತಮ್ಮಥವರು ಇಷ್ಟು ಲೀಗಲ್ ಆದರೆ ಹೇಗೆ ?

ಶ್ರೀ ಎಚ್. ಎಂ. ಚನ್ನಬಸಪ್ಪ:—ಲೋಕಲ್ ಕ್ಯಾಂಡಿಡೇಟ್ಸ್ ವಿಷಯಕ್ಕೂ ಕ್ಯಾಷುಯಲ್ ಲೇಬರರ್ಸ್ ವಿಷಯಕ್ಕೂ ಬಹಳ ವ್ಯತ್ಯಾಸವಿದ.

ಶ್ರೀ ಎಂ. ಎಸ್. ಕೃಷ್ಣನ್:—ಅವರಿಗೆ ಭರವಸೆ ಕೊಟ್ಟರೆ ಉಳಿದುಕೊಳ್ಳುತ್ತಾರೆ. ?

SRI H. M. CHANNABASAPPA:—I have absolutely on reservation in the matter ಟೆಂಪರರಿ ಕೆಲಸಗಾರರ ವಿಷಯದಲ್ಲಿ ಸಹಾನುಭೂತಿ ಇರಬೇಕು ಆ ಬಗ್ಗೆ ಪ್ರಶ್ನೆ ಕೇಳಿದರೆ ಮಾಹಿತಿ ತರಿಸಿಕೊಂಡು ಉತ್ತರ ಕೊಡುವುದು ಯೋಗ್ಯ, ಮಾಹಿತಿ ಇಲ್ಲದೆ ಉತ್ತರ ಕೊಡುವುದು ಯೋಗ್ಯವಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:—ಎಚ್‌ಇಪಿಯಲ್ಲಿ ಹಂಗಾಮಿಯಾಗಿ ನೇಮಿಸಿಕೊಂಡಿದ್ದ ನೌಕರರು ಯಾವ ಸಂಬಳವನ್ನು ಪಡೆಯುತ್ತಿದ್ದರು ಅದೇ ಸಂಬಳವನ್ನು ಮೈಸೂರು ಪವರ್ ಕಾರ್ಪೊರೇಷನ್‌ನಲ್ಲಿಯೂ ಕೂಡ ಕೊಡುವುದಕ್ಕೆ ತಾವು ಸೂಕ್ತವಾದಂಥ ಸಲಹೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ:—ನಾನು ಆಗಲೇ ಹೇಳಿದೆ ಎಲ್ಲಾ ವಿಷಯಗಳನ್ನು ತಿಳಿಸಿದ್ದೇನೆ. ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಇನಿಷಿಯೇಟ್ ಮಾಡಬೇಕೆಂದು ಮ್ಯಾನೇಜಿಂಗ್ ಡೈರೆಕ್ಟರ್‌ಗೆ ಆಜ್ಞೆ ಕೊಟ್ಟಿದ್ದೇನೆ. ವಿವರಗಳನ್ನು ಸೂಕ್ತರೀತಿಯಲ್ಲಿ ಪರಿಶೀಲನೆ ಮಾಡಿ ಸೂಕ್ತ ಆಜ್ಞೆಯನ್ನು ಹೊರಡಿಸಲಾಗುತ್ತದೆ.

(iii) *Re:—Supply of A. T. S. injections to Government Hospital at Chickmagalur*

SRI G. PUTTASWAMY (Mudigere):—Madam Speaker I call the attention of the hon. Minister for Health to the Supply of A. T. S. injections and other emergency Drugs to the Government Hospital at Chickmagalur.

SRI H. SIDDAVEERAPPA (Minister for Health).—Ma lam,

The District Surgeon, General Hospital, Chickmagalur has reported that the Hospital was short of the A. T. S. injections only during the month of March 1972 due to certain reasons such as inadequate supply from the Government Medical Stores, non-existence of budgetary provision due to financial year ending. However, during this period, local purchases of 21 ampoules of A. T. S. prophylactic was made to meet immediate needs. He has further reported that the Hospital is now having 500 ampoules of A. T. S. prophylactic and another 110 curatives ampoules. The stock position of A. T. S. prophylactic as on 7th July 1972 is adequate and it is sufficient to last for 2 months. The stock will be further replenished as and when necessary.

ಶ್ರೀ ಜಿ. ಪುಟ್ಟಸ್ವಾಮಿ.— ಎಮರ್‌ಜೆನ್ಸಿ ಡ್ರಗ್ ಔಟ್‌ಮೇಷಂಟ್‌ಗಳಿಗೆ ಒದಗಿಸತಕ್ಕಂಥದ್ದು ಸರ್ಕಾರದ ಆದ್ಯ ಕರ್ತವ್ಯ. ಪ್ರತಿ ವರ್ಷ ಎಷ್ಟು ರೋಗಿಗಳು ಆಸ್ಪತ್ರೆಗೆ ಬರುತ್ತಾರೆ ಅಷ್ಟು ರೋಗಿಗಳಿಗೆ ಆಗುವಷ್ಟು ಔಷಧಿಗಳನ್ನು ಒದಗಿಸುತ್ತಾ ಇಲ್ಲ. ಬಡ್ಜೆಟ್ಟಿನಲ್ಲಿ ರೋಗಿಗಳಿಗೆ ಸಾಕಾಗುವಷ್ಟು ಹಣ ಪ್ರೊವೈಡ್ ಮಾಡಿಲ್ಲ ಎಂದು ಹೇಳುತ್ತೀನೆ. ದೇಶದಲ್ಲಿ ಅನೇಕ ಕಡೆ ರೋಗ ಗಳಿಗೆ ಎಮರ್ಜೆನ್ಸಿ ಡ್ರಗ್ಸ್ ಇಲ್ಲದೆ ಇದ್ದರೆ ಅದಕ್ಕಾಗಿ ಸಾಕಾದಷ್ಟು ಹಣ ಬಜೆಟ್ಟಿನಲ್ಲಿ ಒದಗಿಸಿ ರೋಗಿಗಳಿಗೆ ಔಷಧಿ ಒದಗಿಸುವ ವ್ಯವಸ್ಥೆ ಮಾಡುತ್ತೀವೆಂದು ಭರವಸೆ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.— ಮಾನ್ಯ ಸದಸ್ಯರು ಹೇಳುವ ಮಾತಿನಲ್ಲಿ ಅರ್ಥವಿದೆ. ಸಕಾದಷ್ಟು ಔಷಧಿಗಳು ಕೆಲವು ಸ್ಥಳೀಯ ಆಸ್ಪತ್ರೆಗಳಲ್ಲಿ ಇರುವುದಿಲ್ಲ. ಎನ್ನತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಸರ್ಕಾರದವರು ಈ ವರ್ಷ ಅದಕ್ಕೆ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಇದುವರೆಗೂ ಏನು ಔಷಧಿಗಳನ್ನು ಸರ್ಕಾರದವರು ಕೊಂಡುಕೊಳ್ಳುತ್ತಿದ್ದಾರೆ ಆ ಪದ್ಧತಿಯಲ್ಲಿ ಅನೇಕ ನ್ಯೂನತೆಗಳು ಇವೆ. ರೇಟ್ ಕಂಟ್ರಾಕ್ಟ್ ಬೇಸಿಸ್ ಮೇಲೆ ಔಷಧಿಗಳನ್ನು ತೆಗೆದುಕೊಳ್ಳುವುದರಿಂದ ಅನೇಕ ವಿಧವಾದ ನ್ಯೂನತೆಗಳು ಕಂಡುಬಂದು ಈ ಪದ್ಧತಿಯನ್ನೇ ಬದಲಾವಣೆ ಮಾಡಿ ಯಾವ ಆಸ್ಪತ್ರೆ ಎಷ್ಟೆಷ್ಟು ಔಷಧಿಗಳು ಬೇಕೆಂಬುದನ್ನು ಮುಂಗಡವಾಗಿ ತರಿಸಿ ಸ್ಟಾಕ್ ಮಾಡಲಿಕ್ಕೆ ಹುಕುಂ ಕೊಟ್ಟಿದೆ. ಅದರಮೇಲೆ ಒಂದು ಸಮಿತಿಯನ್ನು ನೇಮಿಸಿ ಯಾವರೀತಿ ಮಾಡಿದರೆ ಸರಿಹೋಗುತ್ತದೆ- ಯಾವ ರೀತಿ ಔಷಧಿಗಳನ್ನು ಕೊಂಡುಕೊಳ್ಳಬೇಕು ಎನ್ನುವುದರ ಬಗ್ಗೆ ವಿಚಾರಣೆ ನಡೆಯುತ್ತಿದೆ ಇದುವರೆಗೆ ಇರುವ ನ್ಯೂನತೆಗಳನ್ನು ಪರಿಹಾರ ಮಾಡಲಿಕ್ಕೆ ಕಾರ್ಯಕ್ರಮ ತೀವ್ರವಾಗಿ ಕೈಕೊಳ್ಳುತ್ತೇವೆ ಎನ್ನುವುದನ್ನು ಮಾನ್ಯ ಸಭೆಗೆ ತಿಳಿಸುತ್ತೇನೆ.

(iii) Re:Orders of the Joint D.P.I. Dharwar about T.C. of girl Students of Janata Vidyalaya.

Sri B.G. BANAKAR (HIRE KERUR):—I call the attention of the Minister for Education to the direction issued by Joint director of Public Instruction, Dharwar, to Janata Vidhyalaya, Dandeli, to issue transfer certificates of girl students.

MADAM SPEAKER;—The notice of Smt Radha Bhat on the same subjuct is also teken up with this notice.

SRI A.R. BADARINARAYAN (MINISTER FOR EDUCATION):—

Kanya Vidyalaya is the only Girls High School at Dandeli, North Kanara district teaching exclusively through the medium of Kannada. There is another High School at the same place *viz.*, Janatha Vidyanilaya. This is meant for boys and the medium of instruction in this school is Marathi, English and Kannada. Being a Boys High

(SRI A. R. BADARINARAYAN)

School, the Head Master of Janatha Vidyalaya ought to have admitted only boys for Kannada Medium section. It was not correct on his part to have entertained applications from girls seeking Kannada Medium of Instruction since there was a separate High School meant exclusively for girls with Kannada Medium. However, it was found that the Janatha Vidyalaya took in girls also in their Kannada Medium classes and thus entered into an unhealthy competition with the Kanya Vidyalaya. The result of this unhealthy competition would have ultimately resulted in the closure of Standard VIII of the only Girls High School with Kannada Medium of Instruction.

2. Closure of Standard VIII in this Girls High School with Kannada Medium would certainly not be a desirable development and would be going against the policy of encouraging girls education and that too in the Kannda Medium. Further, the closing of this institution would have been accompanied with the usual problems of retrenchment of staff, etc.,

3. Since this was a case in which this unhealthy competition could have been avoided, and by such avoidance, of unhealthy competition, the above mentioned problems could have been cured, the Joint Director of Public Instruction Dharwar, issued insructions on 6th June 1972 to the Head Master, Janatha Vidyalaya, to issue Transfer Certificates to all the girls admitted to Standard VIII with Kannda Medium of Instruction.

ಶ್ರೀ ಬಿ.ಜಿ. ಬಣಕಾರ್.—ಇಲ್ಲಿರುವ ವಿದ್ಯಾಲಯ ಹಾಗೂ ಹೈಸ್ಕೂಲು ಮೊದಲಿಂದಲೂ ನಡೆಯುತ್ತಿದೆ ಎಂದು ಹೇಳಿದರು, ಇದರಲ್ಲಿ ಹೆಣ್ಣು ಮಕ್ಕಳು ಓದುತ್ತಿದ್ದರು. ಆದರೆ ಕನ್ಯಾ ವಿದ್ಯಾಲಯ ಎಂದು ಇದನ್ನು ಆರಂಭ ಮಾಡಿಸುವುದರ ಅವಶ್ಯಕತೆ ಯಾದರೂ ಏನಿತ್ತು? ಇದರಲ್ಲಿ ತುಂಬೆ ತಾಯಿಗಳು ಅವರ ಇಷ್ಟ ಪ್ರಕಾರ ಒಂದು ಶಾಲೆಗೆ ಸೇರಿಸಬೇಕೆಂದಿರುವಾಗ ಅವರ ಮೇಲೆ ಒತ್ತಾಯ ತಂದು ಇಂತಹ ಶಾಲೆಗೇ ಸೇರಿಸಬೇಕೆಂದು ಮಾಡುವುದು ಸರಿಯೇ? ಆದರಲ್ಲೂ ಕನ್ಯಾ ವಿದ್ಯಾಲಯ ಎನ್ನುವುದನ್ನು ಇಲ್ಲಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಆಫೀಸಿನ ಕೆಲವು ಅಧಿಕಾರಿಗಳೇ ನಡೆಸುತ್ತಿದ್ದಾರೆ. ಇಲ್ಲಿ ಇಂಥ ಹೈಸ್ಕೂಲುಗಳು ನಷ್ಟವಾಗುತ್ತಿವೆ. ಇಂತಹ ಹೈಸ್ಕೂಲುಗಳಲ್ಲಿ ಸರಿಯಾದ ಪ್ಲೇಗ್ರೌಂಡು ಇಲ್ಲ ಲ್ಯಾಬೋರೇಟರಿ ಇಲ್ಲ, ಕ್ವಾಲಿಫೈಡ್ ಹೆಡ್‌ಮಾಸ್ಟರುಗಳು ಇಲ್ಲ, ಈ ರೀತಿ ಅನಾನುಕೂಲತೆಗಳು ಇದ್ದರೂ ಇಲ್ಲಿನ ವಿದ್ಯಾ ಇಲಾಖೆ ಅಧಿಕಾರಿಗಳೇ ಇಲ್ಲಿ ಶಾಲೆಗಳನ್ನು ನಡೆಸುತ್ತಿರುವುದರಿಂದ ಇವರ ಮೇಲೆ ಸರಕಾರ ತಕ್ಕ ಕ್ರಮ ಏಕೆ ತೆಗೆದು ಕೊಳ್ಳಬಾರದು? ಇದರ ಮೇಲೆ ಸರಕಾರ ಉತ್ತರ ಕೊಡಬೇಕು.

ಶ್ರೀ ಎ ಆರ್. ಬದರೀನಾರಾಯಣ್.—ಇಲ್ಲಿರುವ ಜನತಾ ವಿದ್ಯಾಲಯ ಬಹಳ ದಿವಸಗಳಿಂದಲೂ ಇದೆ. ಆದರೆ ಇಲ್ಲಿ ಒಂದು ಕನ್ಯಾ ವಿದ್ಯಾಲಯ ಈಗ್ಗೆ ಎರಡು ವರ್ಷಗಳ ಹಿಂದೆ ಸಾ ಪನೆಯಾಗಿದೆ. ಇದನ್ನು ಆಗ ಏಕೆ ಮಾಡಿದರೋ ಗೊತ್ತಿಲ್ಲ. ಆಗ ಅವರಿಂದ ಅರ್ಜಿಗಳು ಶಾಲೆ ತೆಗೆಯಬೇಕೆಂದು ಬಂದಿರ ಬಹುದು. ಅದರಂತೆ ಆಗ ಅನುಮತಿ ಕೊಟ್ಟಿರಬಹುದು, ಕನ್ಯಾ ವಿದ್ಯಾಲಯದಲ್ಲಿ ಹೆಣ್ಣು ಮಕ್ಕಳೇ ವಿದ್ಯಾಭ್ಯಾಸ ಮಾಡಲು ಹೋಗಬೇಕು, ಬಹುಶಃ ಇಲ್ಲಿ ಒಂದು ಶಾಲೆಗೂ ಇನ್ನೊಂದು ಶಾಲೆಗೂ ಲೋಕಲ್ ರೈವಲ್ರಿ ಇರಬೇಕು, ಇಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆ ತೆಗೆದಿರುವುದರಿಂದ ಬಹುಶಃ ಹೆಣ್ಣು ಮಕ್ಕಳೇ ಇಲ್ಲಿಗೇ ಹೋಗಬೇಕು, ಇಲ್ಲಿ ಸರಿಯಾದ ಎಕ್ವಿಪ್‌ಮೆಂಟ್ ಇಲ್ಲ ಎಂದು ತಿಳಿಸಿದರು. ಇದನ್ನು ಆ ಶಾಲೆಗಳ ಗಮನ ಕೊಡಬೇಕು

(iv) Re.—Nonavailability of admission to SC ST Students for P.U.C. in Bangalore.

Sri M.H. Jayaprash Narayan (Sirsi.— I call the attention of the Minister for Education to the nonaovailability of admission to scheduled castes scheduled tribes students for P.U.C. in the (i) Government Science College, Bangalore, (ii) Government Arts College, Bangalore, (iii) Maharani's College, Bangalore.

Sri A. R. Badarinarayan—.I State as follows.—

It has been stated in the Calling Attention Notice tabled by the Honourable Members that 232 Scheduled Castes Students who have applied for seats to prosecute their studies in the Pre-University Classes in the Colleges-

(i) Government Scinece College, Bangalore,

(ii) Government Arts College, Banglore, and

(iii) Maharani's College, Bangalore

have been refused admission by the respective Principals of the Colleges.

2. In this connection, information was called for from all the colleges and I have to make the following statement.

3. Let us first take the position as existing with regard to P.U.C. candidates. The Government Science College, Bangalore—the number of seats so far filled in are 320. Out of these, 86 seats have been allotted to scheduled Castes/Scheduled Tribes Candidates. The numder of candidates belonging to Scheduled Castes/Scheduled Tribes who have been refused admission is nil. Coming to the Government Arts College, Bangalore, we find that the number of seats so far filled is 355. Out of these, 113 seats have been allotted to Scheduled Castes/ Scheduled Tribes Candidates. The number of condidates belonging to Scheduled Castes/Scheduled Tribes who have been refused admission is nil. Taking the Maharani's College for Women, Bangalore, it is noticed that the number of seats so far filled in is 611. Out of these, 111 seats have deen allotted to Scheduled Castes/Scheduled Tribes candidates. The number of candidates belonging to Scheduled Castes Scheduled Tribes who have not yet been admitted in this college is 18. On contacting the Principal, Moharani's College for women, Bangalore, it was learnt that these 18 students, even though they had submitted their applications, had not yet reported before the college authorities. I may state that even these cases will be sympathetically considered in case these candidates contact the college authorities before the last day prescribed for admissions is over.

4. Coming to the case of Degree Students, the following statistics would speak for itself about the existing position. In the Government Science College, Bangalore, out of 285 seats filled in, 66 have been allotted to Scheduled Castes/Scheduled Tribes Candidates. The

(SRI A. R. BADARINARAYAN)

number of Scheduled Castes/Scheduled Tribes Candidates refused admission is nil. In the Government Arts College, Bangalore, out of 307 seats so far filled in, 81 have been allotted to the Scheduled Castes/Scheduled Tribes Candidates.' Here also no Scheduled Castes/Scheduled Tribes Candidates has been refused admision. In the first year B.A. & B.S.C., of the Maharani's College, Bangalore, 405 seats have so far been filled in. Out of these, 41 are allotted to Scheduled Castes/Scheduled Tribes Candidates. The number of candidates refused admission is nil.

5. Such being the case, the apprehensions of the Members that Scheduled Castes/Scheduled Tribes candidates are not being allotted seats to undergo their courses of study in the Government Colleges mentioned in this notice are unfounded.

ಶ್ರೀ ಎಂ.ಎಚ್. ಜಯಪ್ರಕಾಶ ನಾರಾಯಣ್.—ಸ್ವಾಮೀ ನಾವು ಕಳಂಹಿಸಿಕೊಟ್ಟಿರುವ ಕಾಲ್ ಅಟೆನ್‌ಷನ್ ನೋಟೀಸಿನ ಬಗ್ಗೆ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ನಾವು ಕಾಲ್ ಅಟೆನ್‌ಷನ್ ಕಳಂಹಿಸಿರುವುದರ ಉಪಯೋಗ ಇದೆಯೋ ಇಲ್ಲವೋ ಎನ್ನುವಂತೆ ಕಾಣುತ್ತಿದೆ. ಇದಕ್ಕೆ ಮೊದಲನೇ ಕಾರಣವಾಗಿ ಮಾನ್ಯ ವಿದ್ಯಾ ಮಂತ್ರಿಗಳ ಮನೆಯ ಮುಂದೆ ಎಷ್ಟು ವಿದ್ಯಾರ್ಥಿಗಳಿಗೆ ಸೀಟುಗಳು ಸಿಗಲಿಲ್ಲ, ಅವರನ್ನೆಲ್ಲ ಸೂಪಿಸಿದರೆ ಆಗ ಅವರಿಗೇ ಗೊತ್ತಾಗುತ್ತದೆ. ಯಾವ ಕಾಂಬಿನೇಷನ್ ಈ ಮಕ್ಕಳು ಕೇಳಿದರೋ ಅವರಿಗೆ ಆ ಕಾಂಬಿನೇಷನ್ ಇಲ್ಲ ಎಂದು ಅವರಿಗೆ ಸೀಟು ಕೊಟ್ಟಿಲ್ಲ. ಇಲ್ಲಿ ಅಂಕ ಅಂಶಗಳನ್ನು ಕೊಟ್ಟಿರುವುದರಲ್ಲಿ ನಮಗೆ ನಂಬಿಕೆ ಇಲ್ಲ. ಇಂದೂ ಕೂಡ ವಿದ್ಯಾರ್ಥಿಗಳಿಗೆ ಸೀಟೂ ಸಿಗಲಿಲ್ಲ ಮತ್ತು ಅವರಿಗೆ ಇರಬೇಕಾದ ಹಾಸ್ಟಲ್‌ಗಳಲ್ಲೂ ಸೀಟು ಸಿಗಲಿಲ್ಲ, ಇದರಲ್ಲಿ ಕೆಲವರು ಪಿ ಸಿ ಎಂ ಹಾಗೂ ಸಿ ಬಿ ಜಡ್ ಕಾಂಬಿನೇಷನ್ ಕೇಳಿದರೆ ಆ ಕಾಂಬಿನೇಷನ್ ಇಲ್ಲ ಎಂದು ಅವರಲ್ಲಿ ಕೆಲವರನ್ನು ಆರ್ಟ್ ಕಾಂಬಿನೇಷನ್ ತೆಗೆದುಕೊಳ್ಳಬೇಕೆಂದು ಹೇಳಿ ಕೆಲವರು ಮಾತ್ರ ಆರ್ಟ್ಸ್ ಕಾಲೇಜಿಗೆ ಹೋಗಿದ್ದಾರೆ: ಅವರಿಗೆ ಇಚ್ಛೆ ಇರತಕ್ಕ ಕಾಂಬಿನೇಷನನ್ನು ಇದುವರೆಗೂ ಕೊಟ್ಟಿಲ್ಲ. ಮತ್ತು ಈಗ ಸೇರಿರತಕ್ಕ ವಿದ್ಯಾರ್ಥಿಗಳಿಗೆ ನಗರದಲ್ಲಿರುವ ಹಾಸ್ಟಲ್‌ನಲ್ಲಿ ಸೀಟುಗಳನ್ನು ಕೊಟ್ಟಿಲ್ಲ. ಇದು ಸತ್ಯವಾದ ವಿಷಯ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವೊತ್ತಿನವರೆಗೆ ಹಾಸ್ಟಲ್‌ನಲ್ಲಿ ಸೀಟುಗಳಿಲ್ಲ ಮತ್ತು ವಿವಿಧ ಕಾಲೇಜುಗಳಲ್ಲಿ ಅವರಿಗೆ ಕೇಳಿದ ಕಾಂಬಿನೇಷನ್ ಸೀಟು ಇಲ್ಲ ಎನ್ನುತ್ತಾರೆ. ಈಗಲಾದರೂ ಇವರೆಲ್ಲರಿಗೂ ಸೀಟುಗಳನ್ನು ಕೊಡಿಸುವ ಏರ್ಪಾಡು ಮಾಡುತ್ತಾರೆಯೇ?

ಶ್ರೀ ಎ.ಆರ್. ಬದರೀನಾರಾಯಣ್.—ನಾನು ತಮಗೆ ಇನ್‌ಫರ್‌ಮೇಷನ್ ಕೊಟ್ಟಿದ್ದೇನೆ. ಇದಲ್ಲದೆ ತಮಗೆ ಬೇರೆ ಇನ್‌ಫರ್‌ಮೇಷನ್ ಇದ್ದರೆ ಅದನ್ನು ನನಗೆ ತಿಳಿಸಿದರೆ ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ ಬಿ. ರಾಮಸ್ವಾಮಿ.—ಹಳ್ಳಿಗಾಡಿನಿಂದ ರೈತರುಗಳ ಮಕ್ಕಳು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಬೇಕೆಂದು ಬಂದಿದ್ದಾರೆ. ಇಂತಹ ಮಕ್ಕಳು ಕೇವಲ ಶೇಕಡಾ ೩೫ ರಷ್ಟು ಅಂಕ ಪಡೆದಿರುವವರೇ ಆಗಿರುತ್ತಾರೆ. ಹೆಚ್ಚು ಅಂಕಗಳನ್ನು ಪಡೆದಿರುವವರಿಗೆ ಎಂದರೆ ಶೇಕಡಾ ೮೦ ಇಲ್ಲವೇ ೯೦ ರಷ್ಟು ಅಂಕಗಳು ಬಂದಿರುವವರಿಗೆ ನ್ಯಾಷನಲ್ ಕಾಲೇಜು ಇಲ್ಲವೇ ಇತರ ದೊಡ್ಡ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುತ್ತಾರೆ. ಆದರೆ ಹಳ್ಳಿಗಾಡಿನಲ್ಲಿ ಇರುವ ರೈತರ ಮಕ್ಕಳು ವ್ಯಾಸಂಗ ಮಾಡಲು ಬೆಂಗಳೂರಿನ ಕಾಲೇಜುಗಳಿಗೆ ಬಂದಿರುವಾಗ ಅವರಿಗೆ ಸೀಟುಗಳಿಲ್ಲ ಎನ್ನುತ್ತಾರೆ. ಇವರೆಲ್ಲರೂ ಒಂದೇ ಕಾಲೇಜಿಗೆ ಮಾತ್ರ ಸೀಟಿಗಾಗಿ ಅಪ್ಲೈ ಮಾಡಿರುತ್ತಾರೆ, ಇವ್ಲಿಗೆ ಬಂದು ಸುಮಾರು ೧೫-೨೦ ದಿನಗಳಿಂದಲೂ ಕಷ್ಟಪಡುತ್ತಿದ್ದಾರೆ. ಕಾಲೇಜುಗಳಲ್ಲಿ ಸೀಟುಗಳು ಬೇಕೆಂದು ಕೇಳಿದರೆ ಸರಕಾರದಿಂದ ಆದೇಶ ಬಂದಿಲ್ಲ ಎನ್ನುತ್ತಾರೆ. ಹಳ್ಳಿಯ ರೈತರು ಎಂದರೆ ಬಡ ಜೋರೇಗೌಡರ ಮಕ್ಕಳು ನಗರದಲ್ಲಿ ಬಂದು ವ್ಯಾಸಂಗ ಮಾಡಬೇಕೆಂದು ಬಂದಿದ್ದಾರೆ ಇಂತಹ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೇ ಶೇಕಡಾ ೩೫ ಅಥವಾ ಕಡಿಮೆ ಅಂಕಗಳು ಬಂದ ದ್ದರೂ ಇವರಿಗೆ ಕಾಲೇಜುಗಳಲ್ಲಿ ಸೇರಿಕೊಳ್ಳಲು ಸಹಾಯ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

2-00 P.M.

ಶ್ರೀ ಎ. ಆರ್. ಬದರಿನಾರಾಯಣ್ .—ಮಾನ್ಯ ಸದಸ್ಯರು ನ್ಯಾಷನಲ್ ಕಾಲೇಜ್ ಬಗ್ಗೆ ಹೇಳುತ್ತಿದ್ದಾರೆ. ಆ ವಿವರ ನನ್ನ ಹತ್ತಿರ ಇಲ್ಲ. ಅವರು ಆದರ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ವಿವರ ತರಿಸಿ ಕೊಂಡು ತಿಳಿಸುತ್ತೇನೆ.

ಶ್ರೀ ಎಚ್. ಪುಟ್ಟದಾಸ್ .—ಯಾವ ಯಾವ ಕಾಲೇಜುಗಳಲ್ಲಿ ಎಷ್ಟೆಷ್ಟು ಸೀಟ್‌ಗಳನ್ನು ಕೊಡಲಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಎಷ್ಟೆಷ್ಟು ಅರ್ಜಿಗಳು ಬಂದಿವೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಆ ವಿವರಗಳು ಇಲ್ಲ.

ಶ್ರೀ ಕೆ. ಪ್ರಭಾಕರ್ .— ಎಲ್ಲ ಕಡೆಗಳಲ್ಲಿಯೂ ಸೀಟ್‌ಗಳನ್ನು ಕೊಡಲಾಗಿದೆ ಎಂದು ತಮ್ಮ ಉತ್ತರದಲ್ಲಿ ಹೇಳಿಕೊಂಡು ಬಂದಿದ್ದೀರಿ. ಅಂದರೆ ಆಯಾ ಕಾಲೇಜುಗಳಿಗೆ ಬಂದಂಥ ಅರ್ಜಿಗಳು ಅಷ್ಟೇ ಎಂದು ಅರ್ಥವಾಗುತ್ತದೆ ಇದರಲ್ಲಿ ಆಗಿರತಕ್ಕಂಥ ಅಕ್ರಮಗಳನ್ನು ತಮ್ಮ ಗಮನಕ್ಕೆ ತಂದರೆ ತಾವು ಸರಿಪಡಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್ .—ನನ್ನ ಗಮನಕ್ಕೆ ತಂದರೆ ಸರಿಪಡಿಸುತ್ತೇನೆ.

Ruling of the Chair

Re. Inconstisences in press reports and Statement of the Minister of State for Food and Civil Supplies.

ಅಧ್ಯಕ್ಷರು .—ಮುಂದಿನ ವಿಷಯಕ್ಕೆ ಹೋಗುವುದಕ್ಕೆ ಮೊದಲು ಒಂದು ರೂಲಿಂಗ್ ಕೊಡಬೇಕಾಗಿದೆ. ಅದೇನೆಂದರೆ ಮಾನ್ಯ ನಾಗಣ್ಣನವರು ಆಡಿಗಡಿಗೆ ಎದ್ದು ಮಾನ್ಯ ಆಹಾರ ಸಚಿವರು ಸೀಮೆಎಣ್ಣೆ ಲೈಸೆನ್ಸ್ ಬಗ್ಗೆ ಈ ಸಭೆಯಲ್ಲಿ ಕೊಟ್ಟ ಸ್ಟೇಟ್‌ಮೆಂಟಿಗೂ, ಪತ್ರಿಕೆಗಳಲ್ಲಿ ವರದಿಯಾಗಿರುವುದಕ್ಕೂ ವ್ಯತ್ಯಾಸ ವಿರುವುದರಿಂದ ತಮ್ಮ ಅಧಿಕೃತ ವರದಿಗಾರರ ವರದಿ ನೋಡಿ ಯಾವುದು ಸರಿ ಎಂಬ ಬಗ್ಗೆ ರೂಲಿಂಗ್ ಕೊಡಬೇಕೆಂದು ಕೇಳುತ್ತಿದ್ದರು. ಆದರ ಬಗ್ಗೆ ಈಗ ರೂಲಿಂಗ್ ಕೊಡುತ್ತೇನೆ.

On 19th July 1972, in response to a request by the Hon. Members, the Hon. Minister of State for Food and Civil Supplies made a statement on the scarcity of kerosene in Bangalore. The question of issue of licences to a particular dealer figured in the discussion. The Minister made a statement.

Next day, the papers published that statement. According to to the report in the Press, the Minister was reported to have stated as follows :—

"ಸೀಮೆಯೆಣ್ಣೆ ಏಜೆಂಟ್ ಶ್ರೀ ಕೆ. ಕೆ ಮೂರ್ತಿಯವರ ಬಗ್ಗೆ ಮಾಡಿದ ಆರೋಪ ಪುನ್ಸ್ಥಾಪಿಸಿ ನಾವು ಅವರಿಗೆ ಏಜೆನ್ಸಿ ಕೊಟ್ಟರಲ್ಲಿ ಹಿಂದಿನ ಸರ್ಕಾರ ಕೊಟ್ಟಿತ್ತೋ ಏನೋ ಎಂದು ತಿಳಿಸಿ ಈಗ ಅವರು ಲೈಸೆನ್ಸ್ ಪಡೆದಿದ್ದಾರೆ, ಬೆಂಗಳೂರಿನಲ್ಲಿಯೇ ಸೀಮೆಯೆಣ್ಣೆ ಮಾರಲು ಅವರಿಗೆ ಸೂಚನೆ ನೀಡಲಾಗಿದೆ ಯೆಂದು ಹೇಳಿದರು"

On 20th July 1972 some members gave notice of an adjournment motion, a copy of which was sent to the Minister. It is under stood that the Minister got a copy of the proceedings relating to her statement in the assembly on the previous day from my Secretariat

(ಅಧ್ಯಕ್ಷರು)

and basing on the proceedings she made a statement on 21st July 1972. In short, the Minister stated as follows : —

"Messrs. Rao Murthy & Co., of which Sri K. K. Murthy is a partner are the wholesale licensed dealers in kerosene supplied by the I. O. C. They have taken a license from the Joint Director, Informal Rationing, who is the licensing authority for the Bangalore Corporation area under the provisions of the Mysore Kerosene Dealers Licensing, Order, 1969, in April 1969. This license is being renewed every year and the present license is valid upto 31st December 1972. On 14th July 1972 they have obtained a license from the Deputy Commissioner, Bangalore, to carry on wholesale business at Ramanagaram and Bidadi... I have not made the statement which the hon. member states that I have made. In fact, the statement I have made is as follows :

ಸಾಮಾನ್ಯವಾಗಿ ಹೇಳುವುದಾದರೆ, ಲೈಸೆನ್ಸ್ ಇಲ್ಲದೆ ಎಣ್ಣೆ ಮಾರುವುದು ತಪ್ಪು. ಈ ರೀತಿ ಮಾರುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದೆ ಎಂದು ನಾನು ಈ ಸಭೆಯಲ್ಲಿ ಹೇಳಿದ್ದೇನೆ.

If the provisions of the license have been contravened by any person, appropriate action will be taken against such person."

Later, Sri K. M. Naganna and some other hon. Members have been stating in the House that the Ministe's statement on 21st July was inconsistent with what she had stated on the 19th July. I promised to look into the matter.

I have accordingly looked into the relevant proceedings.

The Editor of Debates looked into the Shorthand outlines and from that it is clear that the Minister had stated among other things that Sri K. K. Murthy had not taken license.

It has been contended that there is contradiction between the statement made by the Minister on 19th and 21st July. I am unable to agree with this. The Hon Minister said that Sri Murthy had not taken licence It means that Sri Murthy had no licence for selling kerosene in Ramanagaram etc. From this there is no contradiction and I close the matter. ಆದ್ದರಿಂದ ಮಾನ್ಯ ಮಂತ್ರಿಗಳು ಹೇಳಿರುವುದರಲ್ಲಿಯೂ ತಪ್ಪಿಲ್ಲ, ಪ್ರೆಸ್‌ನಲ್ಲಿ ರಿಪೋರ್ಟ್ ಮಾಡಿರುವುದರಲ್ಲಿಯೂ ತಪ್ಪಿಲ್ಲ, ನಮ್ಮ ರಿಪೋರ್ಟರ್ಸ್ ತೆಗೆದುಕೊಂಡಿರುವುದರಲ್ಲಿಯೂ ತಪ್ಪಿಲ್ಲ.

ಶ್ರೀ ವಾಟಾಳ್ ನಾಗರಾಜ್ .—ತಾವು ಬಹಳ ಬುದ್ಧಿವಂತಿಕೆಯಿಂದ ರೂಲಿಂಗ್ ಕೊಟ್ಟಿದ್ದೀರಿ. ಈ ವಿಷಯದ ಬಗ್ಗೆ ನಾನು, ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀಮಾನ್ ಆರ್ಯರ್‌ಗಂ ಅವರು...

ಅಧ್ಯಕ್ಷರು .—ತಾವು ರೂಲಿಂಗ್ ಮೇಲೆ ಮಾತನಾಡುತ್ತಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್.—ನಾನು ರೂಲಿಂಗ್ ಬಿಟ್ಟು ಮಾತನಾಡುತ್ತಿದ್ದೇನೆ. ಅವರು ಲೈಸೆನ್ಸ್ ಇಲ್ಲದೆ ಸೀಮೆಎಣ್ಣೆ ಮಾರಾಟ ಮಾಡುತ್ತಿರುವ ಬಗ್ಗೆ ಎರಡೂವರೆ ಗಂಟೆಯ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆಂದು ತಮ್ಮನ್ನು ಕೇಳಿದ್ದೆವು;

ಅಧ್ಯಕ್ಷರು—ಅದು ನನಗೆ ಬಂದಿದೆ, ನಾನು ನೋಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾಳೆ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು.—ನಾನು ನೋಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ರೂಲಿಂಗ್ ಕೊಟ್ಟಿದ್ದೀರಿ. ಅದನ್ನು ನಾನು ಪ್ರಶ್ನಿಸುತ್ತಿಲ್ಲ. ಅದಕ್ಕೆ ತಮ್ಮ ಒಂದು ಜಡ್ಜ್‌ಮೆಂಟಿನ ಪರಿಣಾಮ ಏನಾಗಿದೆ ಎಂದರೆ, ಆ ವಿಷಯವನ್ನು ಎತ್ತಿದ ನಮಗೆ ಬುದ್ಧಿ ಇಲ್ಲ. ಪ್ರೆಸ್‌ನವರು ಹೇಳಿರುವುದರಲ್ಲಿ ತಪ್ಪಿಲ್ಲ, ಮಂತ್ರಿಗಳು ಹೇಳಿರುವುದರಲ್ಲಿ ತಪ್ಪಿಲ್ಲ, ತಮ್ಮ ರಿಪೋರ್ಟರ್ಸ್ ಬರೆದುಕೊಂಡಿರುವುದರಲ್ಲಿ ತಪ್ಪಿಲ್ಲವೆಂದು ತಾವು ಹೇಳಿರುವುದರಿಂದ, ಪಾಪ ಮಾಡಿ ಏನು ನಾವು ಇಲ್ಲಿ ಕುಳಿತಿದ್ದೇವೆ, ನಮ್ಮದು ತಪ್ಪಿದೆ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು.—ತಮ್ಮದು ತಪ್ಪಿದೆ ಎಂದು ನಾನು ಹೇಳುವುದಿಲ್ಲ, ನಮ್ಮ ವರದಿಗಾರರ ರಿಪೋರ್ಟ್ಸ್ ಏನಿದೆ ಎಂಬುದನ್ನು ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಹೇಳಿಕೆ ಕೊಟ್ಟ ಸಮಯದಲ್ಲಿ ನಾವು ಸಹ ಇದ್ದೆವು. ಮತ್ತು ಅವರು ಹೇಳಿದ್ದನ್ನು ಕೇಳಿದ್ದೆವು. ಅದೇ ಆಧಾರದ ಮೇಲೆ ಮೊನ್ನೆ ಆ ವಿಷಯದಲ್ಲಿ ನಮ್ಮನ್ನೇ ಸುಳ್ಳು ಮಾಡುತ್ತೀರಾ ಎಂದು ತಮ್ಮನ್ನು ಕೇಳಿದ್ದಕ್ಕೆ ಅದರಲ್ಲಿ ಸುಳ್ಳು ಮಾಡುವ ಪ್ರಶ್ನೆಯೇ ಇಲ್ಲ ಎಂದು ತಾವು ಹೇಳಿದಿರಿ. ಆದರೆ ತಾವು ಈಗ ಕೊಟ್ಟಿರುವ ರೂಲಿಂಗ್‌ನ್ನು ನೋಡಿದರೆ ಸುಳ್ಳು ಮಾಡಿರುವ ಹಾಗೆ...

ಅಧ್ಯಕ್ಷರು.—ನಾನು ಎಲ್ಲ ಆಧಾರದ ಮೇಲೆ ಮಾತನಾಡಿದ್ದೇನೆ. ನಮ್ಮ ರಿಪೋರ್ಟರ್ಸ್ ಏನು ತೆಗೆದುಕೊಂಡಿದ್ದಾರೆ, ಪ್ರೆಸ್‌ನಲ್ಲಿ ಏನು ರಿಪೋರ್ಟ್ ಆಗಿದೆ ಮತ್ತು ಮಾನ್ಯ ಮಂತ್ರಿಗಳು ಕೊಟ್ಟಂತಹ ಸ್ಟೇಟ್‌ಮೆಂಟ್ ಎಲ್ಲವನ್ನೂ ವಿವರವಾಗಿ ನೋಡಿ ಹೇಳಿದ್ದೇನೆ. ನಾನಾಗಿ ಒಂದು ವಾಕ್ಯವನ್ನೂ ಹೊಸದಾಗಿ ಸೇರಿಸಿಲ್ಲ. ನನಗೆ ಅದು ಬೇಕಾಗಿಯೂ ಇಲ್ಲ. ಇರುವುದನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಪಾಪ ಮಾಡಿದ್ದೇವೆ ಎಂದು ತಾವು ಮಾತನಾಡಿದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ನಾನು ಹೊಸದಾಗಿ ಏನನ್ನೂ ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮನಸ್ಸನ್ನು ನೋಯಿಸುವುದಕ್ಕೆ ಈ ವಿಚಾರ ಹೇಳುತ್ತಿಲ್ಲ. ತಮ್ಮ ರೂಲಿಂಗ್‌ನಲ್ಲಿ ರಾಮನಗರದ ವ್ಯಾಖ್ಯಾನ ಬೇರೆ ಬಂದಿದೆ. ಅದು ಇಂಟರ್‌ಪ್ರಿಟೇಷನ್ ಆಫ್ ದಿ ಸೆಂಟೆನ್ಸ್ ಆಗುತ್ತದೆ. ವ್ಯಾಖ್ಯಾನ ಮಾಡಿರುವುದರಲ್ಲಿ ರಾಮನಗರವೇ ಹೊರತು ಬೆಂಗಳೂರು ಅಲ್ಲ ಎಂದು ತಾವು ಹೇಳಿರುವುದು ಎಂದರೆ, ತಮಗೆ ಹೇಳುವುದಕ್ಕೆ ಅಧಿಕಾರ ಇನ್ನೆ, ಆದರೆ ತಮ್ಮನ್ನು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ನಾವೆಲ್ಲಾ ಇಷ್ಟೊಂದು ಜನ ಇಲ್ಲಿದ್ದುಕೊಂಡು ಮಾನ್ಯ ಸಚಿವರು ಹೇಳಿದ್ದನ್ನು ಸ್ಪಷ್ಟವಾಗಿ ಕೇಳಿದ್ದರೂ ಸಹ ಇದು ಹೀಗಾಗುತ್ತದೆ, ಪರಿಸ್ಥಿತಿ ಇಲ್ಲಿಯ ತನಕ ಹೀಗಾಗುತ್ತದೆ ಎಂದು ನಾವು ತಿಳಿದುಕೊಂಡಿರಲಿಲ್ಲ. ನಾವೇ ಬೇಜವಾಬ್ದಾರಿಯಿಂದ ಸುಳ್ಳು ಹೇಳಂತಿದ್ದೇವೆ ಎನ್ನುವ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು.—ನಾನು ಹೊಸದಾಗಿ ಏನನ್ನೂ ಹೇಳಿಲ್ಲ, ಮಾನ್ಯ ಸಚಿವರು ಹೇಳಿದ್ದಾರೆ ಎಂದು ನಾನು ಹೇಳಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ ;—ನಾನು ತಮಲ್ಲಿ ಒಂದು ವಿಷಯ ಕೇಳಿಕೊಳ್ಳುವುದು ಏನೆಂದರೆ ನಮ್ಮ ಮೂಲ ಪ್ರಶ್ನೆ ಸಾಲ್ವ್ ಆಗದೆ ಹಾಗೆಯೇ ಉಳಿಯಿತು. ಈಗ ನಾನು ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಕ್ಕೆ ಹೋಗಲಿವುದಿಲ್ಲ. ಶ್ರೀಮಾನ್ ಕೆ. ಕೆ. ಮೂರ್ತಿಯವರು ಸೀಮೆ ಎಣ್ಣೆ ಮಾರಲು ಲೈಸೆನ್ಸ್ ತೆಗೆದುಕೊಂಡಿದ್ದಾರೆಯೇ ಅಥವಾ ಇಲ್ಲವೇ ?

ಅಧ್ಯಕ್ಷರು :—ನನಗೆ ಅದು ಕನ್‌ಸರ್ನ್ ಇಲ್ಲಿ. ಇಲ್ಲ ನನಗೆ ಕನ್‌ಸರ್ನ್ ಇರುವುದು ಏನೆಂದರೆ ಶ್ರೀಮಾನ್ ನಾಗಣ್ಣನವರು ಹೇಳಿದರು ಆಹಾರ ಖಾತೆಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಕ್ಕೂ ಪ್ರೆಸ್ಸಿನಲ್ಲಿ ವರದಿಯಾಗಿರುವುದಕ್ಕೂ ಕಾಂಟ್ರಡಿಕ್ಟರಿಯಾಗಿದೆ ಎಂದು. ಶ್ರೀಮಾನ್ ಆರ್ಯಂಗ ಅವರು ರಿಪೋರ್ಟರುಗಳಿಗೆ ಎರಡು ಕಣ್ಣು ಇವೆ, ಎರಡು ಕಿವಿ ಇವೆ, ಆಯ್ಯೋಪಾಪ ರಿಪೋರ್ಟರುಗಳಿಗೆ ವರದಿ ಮಾಡಲು ಶಕ್ತಿ ಇಲ್ಲ, ಟೇಪ್‌ರೆಕಾರ್ಡ್ ತರಿಸಿ ಇಡಿ ಎಂದು ಹೇಳಿದರು. ಹೀಗಿರುವಾಗ ರಿಪೋರ್ಟರುಗಳು ಸರಿಯಾಗಿ ತೆಗೆದುಕೊಂಡಿದ್ದಾರೆ ಎಂದು ನಾನು ಹೇಳದೇ ಹೋದರೆ ಹೇಗಾಗುತ್ತದೆ ?

Matter Expnged as Ordered by the chung

ಶ್ರೀ ಎಚ್.ಡಿ. ದೇವೇಗೌಡ ;—ಈಗ ಈ ವಿಷಯದಲ್ಲಿ ನೀವು ಏನೇನೂ ಪಾಪ ಮಾಡಿಲ್ಲ, ನಾವು ಪಾಪ ಮಾಡಿದ್ದೇವೆ. ಯಾವುದೋ ಒಂದು ಏರಿಯಾದಲ್ಲಿ ಅವರು ಲೈಸೆನ್ಸ್ ಇಲ್ಲದೆ ಸೀಮೆಎಣ್ಣೆಯನ್ನು ಮಾರಿದ್ದಾರೆ ಎನ್ನುವುದು ಶತಪಟ್ಟಿದೆ. ಇಂದೇ ತಾರೀಖಿಗೆ ಲೈಸೆನ್ಸ್ ಎಕ್ಸ್‌ಪೈರ್ ಆಗುತ್ತದೆ, ರಿನ್ಯೂ ಮಾಡಿಕೊಳ್ಳಿ ಎಂದು ಯಾರು ಅವರಿಗೆ ಹೇಳಿದರು ?

ಅಧ್ಯಕ್ಷರು ;—ಈ ರೀತಿ ಚಾರ್ಜ್‌ಸ್ ಮಾಡಿದರೆ ಹೇಗೆ ? ವೈಲ್ಡ್ ಅಲಿಗೇಷನ್ ಮಾಡಿದರೆ ಹೇಗೆ ? ಈಗ ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಸೀಮೆ ಎಣ್ಣೆಯ ವಿಷಯಕ್ಕೆ ಸಂಬಂಧಪಟ್ಟ ಹಾಗೆ ೨೦/೨ ಗಂಟೆ ಚರ್ಚೆ ಮಾಡುವುದಕ್ಕೆ ನೋಟೀಸ್ ಕೊಟ್ಟಿದ್ದಾರೆ. ಅದನ್ನು ನಾನು ಕನ್‌ಸಿಡರ್ ಮಾಡುತ್ತಿದ್ದೇನೆ. ಆಗ ತಾವು ಬೇಕಾದರೆ ಈ ಬಗ್ಗೆ ಮಾತನಾಡಬಹುದು. ಈಗ ಸುಮ್ಮನೆ ವೈಲ್ಡ್ ಅಲಿಗೇಷನ್ ಮಾಡಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ :—ಈಗ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಂತಹ ಹೇಳಿಕೆ ಕರೆಕ್ಟ್ ಎನ್ನುವ ಭಾವನೆ ಬಂದಿದೆ. ಅವರಿಗೆ ಲೈಸೆನ್ಸ್ ಇಲ್ಲದಿದ್ದರೂ ಸರ್ಕಾರ ಆ ರೀತಿ ಹೇಳಿಕೆ ಕೊಟ್ಟು ಕೆ. ಕೆ. ಮೂರ್ತಿಯವರನ್ನು ಸರ್ಕಾರದವರು ಪ್ರೊಟೆಕ್ಟ್ ಮಾಡುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ :—ಈಗ ಈ ಬಗ್ಗೆ ಎರೆಡೂವರೆ ಗಂಟೆಗಳ ಚರ್ಚೆ ಮಾಡುವುದಕ್ಕೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಒಂದು ನೋಟೀಸ್ ಕಳಹಿಸಿದ್ದಾರೆ. ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಹೇಳಿಕೆ ಮಾಡಿರತಕ್ಕ ವಿಷಯದಲ್ಲಿ ತಾವು ರೂಲಿಂಗ್ ಕೊಟ್ಟಿದ್ದೀರಿ. ಆದ್ದರಿಂದ ನಾವು ನಮ್ಮ ನಿಲುವಳಿ ಸೂಚನೆಯನ್ನು ಏನು ಕಳುಹಿಸಿದ್ದೇವೆ ಅದರ ಬಗ್ಗೆ ತಮ್ಮ ರೂಲಿಂಗ್ ಅನ್ನು ಎಕ್ಸ್‌ಪೆಕ್ಟ್ ಮಾಡುವ ಅವಶ್ಯಕತೆ ಇಲ್ಲ. ಅದನ್ನು ತಾವು ಕ್ಲೋಜ್ ಮಾಡಿದ್ದೀರಿ. ಆದ್ದರಿಂದ ಅದನ್ನು ನಾವು ಶಿರಸಾವಹಿಸಿ ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್ :—ಈ ಪ್ರಶ್ನೆ ಬರುವುದಿಲ್ಲ. ನಮಗೆ ಎರಡೂವರೆ ಗಂಟೆಯೂ ಚರ್ಚೆಗೆ ಅವಕಾಶವನ್ನು ಕೊಡಬೇಕು. ನಾವು ಆ ಬಗ್ಗೆ ಚರ್ಚೆ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ :—ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಮೊದಲನೆಯ ದಿವಸ ಮಾಡಿದಂತಹ ಹೇಳಿಕೆ ಪತ್ರಿಕೆಯಲ್ಲಿ ವರದಿಯಾಗಿರತಕ್ಕದ್ದು ಮತ್ತು ರಿಪೋರ್ಟರು ತೆಗೆದುಕೊಂಡಿರತಕ್ಕ ದ್ದನ್ನೂ ತಾವು ವೆರಿಫೈ ಮಾಡಿ ಈ ಅಭಿಪ್ರಾಯಕ್ಕೆ ಬಂದಿದ್ದೀರಾ ? ಅಥವಾ ಸಬ್ಸೀಕ್ವೆಂಟಾಗಿ ಅವರು ಈ ಸಭೆಯಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದಾರೆ ಆದರ ಆಧಾರ ಮೇಲೇ ತಾವು ಈ ಅಭಿಪ್ರಾಯಕ್ಕೆ ಬಂದಿದ್ದೀರಾ ಹೇಗೆ ? ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ರಿಪೋರ್ಟರು ವರದಿ ಮಾಡಿರುವುದು ಸರಿಯೇ ಎಂದು ತಾವು ಅವರನ್ನು ವಿಚಾರಣೆ ಮಾಡಬೇಕಾಗುತ್ತದೆ. ಈಗಾಗಲೇ ಅವರು ಮಾಡಿರುವುದರಲ್ಲಿ ತಪ್ಪು ಇಲ್ಲ ಎಂದು ಹೇಳಿದ್ದೀರಿ. ಆದರೂ ಸಹ ಅದನ್ನು ತಾವು ರೀ ಕನ್‌ಸಿಡರ್ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಿ. ನಾನು ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದಕ್ಕೆ ಅಧಿಕಾರ ವಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಾವು ರಿಪೋರ್ಟರನ್ನು ಕರೆಸಿ ಅವರು ವರದಿ ಮಾಡಿರತಕ್ಕದ್ದು ಸರಿಯೇ ಆಥವಾ ತಪ್ಪೇ ಎಂದು ಅವರ ಅಭಿಪ್ರಾಯವನ್ನು ತೆಗೆದುಕೊಂಡು ತಾವು ಈ ರೂಲಿಂಗ್ ಅನ್ನು ಕೊಟ್ಟಿದ್ದರೆ ಸಂತೋಷ. ಅವರನ್ನು ತಾವು ವಿಚಾರಣೆ ಘಾಡದೆ ಕೇವಲ ಮಂತ್ರಿಗಳು ಕೊಟ್ಟಂತಹ ಹೇಳಿಕೆಯೇ ಸರಿ ಎಂದು ತಾವು ಹೇಳಿದರೆ ಅದು ಬಹಳ ಕಷ್ಟವಾಗುತ್ತದೆ. ಈ ಸಭೆಯಲ್ಲಿ ನಾವು ಮುಂದೆ ವ್ಯವಹರಿಸುವುದು ಕಷ್ಟವಾಗುತ್ತದೆ. ರಾವಂನಗರದಲ್ಲಿ ಲೈಸೆನ್ಸ್ ತೆಗೆದುಕೊಂಡಿಲ್ಲ ಎಂದು ಸಚಿವರು ವ್ಯಾಖ್ಯಾನ ಮಾಡಿರಲಿಲ್ಲ. ಈ ಸಭೆಯ ಪ್ರೊಸೀಡಿಂಗ್ಸ್ ಆದಲು ಬದಲು ಆಗುವ ಪರಿಸ್ಥಿತಿ ಇರಬಾರದು. ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡುಗಳ ಸಭೆಯಲ್ಲಿ ನಡೆಯುವ ಪ್ರೊಸೀಡಿಂಗ್ಸ್ ಅನ್ನು ಹೆಚ್ಚು ಕಡಿಮೆ ಮಾಡುವ ಕೆಲವು ಸಂದರ್ಭಗಳು ಬಂದಿವೆ. ಹಾಗಾಗಬಾರದು. ಈ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳ ವರದಿ ಸರಿಯಾದ ರೀತಿಯಲ್ಲಿ ಆಗಬೇಕು. ಅದು ಫೋರ್ಜರಿ ಆದರೆ ಬಹಳ ಕಷ್ಟವಾಗುತ್ತದೆ. ನಾನು ನೊಂದ ಹೃದಯದಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ಆ ರೀತಿ ಫೋರ್ಜರಿ ಆಗುವುದಕ್ಕೆ ಅವಕಾಶವನ್ನು ಕೊಡಬಾರದೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಂ. ನಾಗಣ್ಣ ;—ರಾಮನಗರಕ್ಕೆ ಲೈಸೆನ್ಸ್ ತೆಗೆದುಕೊಂಡಿರಲ್ಲಿಲ್ಲ ಎಂದು ಸಚಿವರು ಹೇಳಿರುವುದನ್ನು ಅಧಿಕೃತ ವರದಿಯಿಂದ ಖಾತರಿ ಪಡಿಸಿಕೊಳ್ಳಬೇಕು.

Scarcity Condition in Bijapur District.

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ) ;—ಸ್ವಾಮಿ, ನಾನು ತಮ್ಮಲ್ಲಿ ಒಂದು ವಿಷಯವನ್ನು ಪ್ರಾರ್ಥನೆ ಮಾಡುತ್ತೇನೆ. ನನಗೆ ಬಿಜಾಪುರ ಜಿಲ್ಲೆಯಿಂದ ಫೋನ್ ಬಂದಿದೆ. ಅಲ್ಲಿ ಪರಿಸ್ಥಿತಿ ತೀವ್ರ ಕಳವಳಕಾರಿಯಾಗಿದೆ. ಬಿಜಾಪುರದ ಡಿವಿಜನಲ್ ಕಮೀಷನರ್ ಅವರು ಆ ಜಿಲ್ಲೆಯಲ್ಲಿ ಕ್ಷಾಮಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸುಮಾರು ೫೦ ಲಕ್ಷ ರೂಪಾಯಿಗಳು ಬೇಕು ಎಂದು ಹೇಳಿದ್ದಾರೆ. ನಿಜವಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಕೇಳಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಅದರ ಸಲುವಾಗಿ ಬಿಜಾಪುರ ಜಿಲ್ಲೆಯಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಆ ಜಿಲ್ಲೆಯ ಡೆಪ್ಯುಟಿ ಕಮೀಷನರಿಗೆ ಎಷ್ಟು ಹಣವನ್ನು ಒದಗಿಸಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಿದರೆ ಒಳ್ಳೆಯದು. ನಿಜವಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನು ಎಗ್ಸಾಜರೇಷನ್ ಮಾಡುವ ಪರಿಸ್ಥಿತಿ ಇಲ್ಲ. ಬಿಜಾಪುರ ಜಿಲ್ಲೆಯ ಡಿವಿಜನಲ್ ಕಮೀಷನರ ರಿಪೋರ್ಟ್ ಪ್ರಕಾರ ಅಲ್ಲಿಗೆ ಎಷ್ಟು ಹಣವನ್ನು ಕಳುಹಿಸಿದ್ದಾರೆ. ಅಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಪ ಬಗ್ಗೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಜನಗಳು ದನಕರುಗಳನ್ನು ಮಾರಿ ಬೇರೆ ಕಡೆ ಗುಳೇ ಕಟ್ಟಿಕೊಂಡು ಹೋಗುತ್ತಿದ್ದಾರೆ. ಅಲ್ಲಿ ಒಂದು ದೊಡ್ಡ ಕೋಲಾಹಲ ಎದ್ದಿದೆ. ಅಲ್ಲಿನ ಜನಗಳು ತುಂಬಾ ಕಷ್ಟದಲ್ಲಿದ್ದಾರೆ. ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಅದರ ಸಲುವಾಗಿ ಅಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಡೆಪ್ಯುಟಿ ಕಮೀಷನರಿಗೆ ತಿಳಿಸಿದ್ದೀರಾ ಹೇಗೆ ಎಂದಂದನ್ನು ಸ್ಪಷ್ಟವಾಗಿ ಹೇಳಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ (ಬಳ್ಳಾಳ್ಳಿ).—ಮಾನ್ಯ ಪಾಟೀಲರು ಹೇಳಿದಹಾಗೆ ನಮಗೆ ನಿಜವಾಗಿಯೂ ಅಲ್ಲಿಂದ ಕಾಗದ ಪತ್ರಗಳು ಬರುತ್ತಿವೆ. ಇದಲ್ಲದೆ ನಿನ್ನೆ ಅಲ್ಲಿಂದ ಒಬ್ಬರು ಇದರ ಬಗ್ಗೆ ವಿಚಾರಿಸುವುದ ಕೋಸ್ಕರ ಬಂದಿದ್ದಾರೆ. ನಾವು ಇದನ್ನು ಮುಖ್ಯಮಂತ್ರಿಯವರ, ರೆವೆನ್ಯೂ ಮಂತ್ರಿಯವರ ಮತ್ತು ಲೋಕೋಪಯೋಗಿ ಇಲಾಖೆಯ ಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂದು ನಮಗೆ ಗೊತ್ತಾಗಿಲ್ಲ. ಮುಖ್ಯಮಂತ್ರಿಯವರು ಅಧಿಕಾರಿಗಳನ್ನು ಕರೆಸಿ ಏಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು ಕೇಳಿದರು. ನಾನಾದರೂ ತಿಳಿದು ಕೊಂಡಿದ್ದೆ ಇವರು ಶನಿವಾರ ದೊಳಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನು ತೆಗೆದುಕೊಳ್ಳುತ್ತಾರೆ ಎಂದು. ಆದರೆ ಇವತ್ತು ಬೆಳಿಗ್ಗೆ ಕೂಡ ಒಬ್ಬರು ಅಲ್ಲಿಂದ ಬಂದಿದ್ದರು. ಅವರಿಗೆ ಏನು ಹೇಳಬೇಕೆಂದು ನಮಗೆ ತಿಳಿಯುತ್ತಾ ಇಲ್ಲ. ಸರ್ಕಾರದವರು ಹೀಗೆ ನೋಡಿಕೊಳ್ಳುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಾ ಇದ್ದರೆ ಹೇಗೆ ? ಅಲ್ಲಿರತಕ್ಕಂತಹ ಪರಿಸ್ಥಿತಿಯನ್ನು ನೋಡಿದರೆ ಯಾರಿಗಾದರೂ ಕಣ್ಣಲ್ಲಿ ನೀರು ಬರುತ್ತದೆ. ನಾವು ಇದನ್ನು ನೊಂದಮನಸ್ಸಿನಿಂದ ಹೇಳುತ್ತಿದ್ದೇವೆ. ಆದ್ದರಿಂದ ಸರ್ಕಾರದವರು ತಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅಲ್ಲಿರತಕ್ಕ ಜನರಿಗೆ ಏನೇನು ಕೆಲಸ ಮಾಡಿತರ ವ್ಯವಸ್ಥೆಗಳನ್ನು ಮಾಡಬೇಕೋ ಅದನ್ನು ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ದಯವಿಟ್ಟು ಇದರಲ್ಲಿ ರಾಜಕೀಯದ ಪ್ರಶ್ನೆಯನ್ನು ತರಬೇಡ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಇದರ ಬಗ್ಗೆ ಈಗಾಗಲೇ ಎರಡೂವರೆ ಗಂಟೆ ಕಾಲ ಚರ್ಚೆಯಾಗಿದೆ. ಆದರೆ ಪರಿಸ್ಥಿತಿ ಬಿಗಡಾಯಿಸಿದೆ. ಮೊನ್ನೆ ಕಂದಾಯ ಮಂತ್ರಿಯವರು ೨–೩ ದಿವಸ ಅವಕಾಶ ಕೊಟ್ಟರೆ ಒಂದು ಹೇಳಿಕೆ ಕೊಡುತ್ತೇನೆಂದು ಹೇಳಿದರು. ನಮ್ಮ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಅಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ. ಪತ್ರಿಕೆಗಳಲ್ಲಿ ಬರುವ ಸಮಾಚಾರವಲ್ಲದೆ, ಬೇರೆ ಅಲ್ಲಿಂದ ಬಂದಿರತಕ್ಕ ಜನರಿಗೆ ಅನೇಕ ವರ್ತಮಾನಗಳು ತಿಳಿದುಬಂದಿದೆ. ಅಲ್ಲಿ ಜನರು ದನಕರುಗಳನ್ನು ಮಾರಿ ವಲಸೆ ಹೋಗುತ್ತಿದ್ದಾರೆ ಆದ್ದರಿಂದ ಇದರ ಬಗ್ಗೆ ತಕ್ಷಣದ ಕಾರ್ಯಕ್ರಮವನ್ನು ತೆಗೆದುಕೊಂಡು ಒಂದು ಶಾಸ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕು. ಈಗಾಗಲೇ ೫೦ ಲಕ್ಷ ರೂಪಾಯಿ ಕೊಡಿ ಎಂದು ಜಿಲ್ಲಾಧಿಕಾರಿಗಳು ಕೇಳಿದ್ದಾರೆಂದು ತಿಳಿದು ಬಂದಿದೆ. ಆದ್ದರಿಂದ ನೀವು ೧೦ ಲಕ್ಷ ಕೊಟ್ಟರೆ ಏನೂ ಸಾಲುವುದಿಲ್ಲ. ಆದ್ದರಿಂದ ಅಲ್ಲಿ ೫೦ ಲಕ್ಷ ಕೊಟ್ಟು ಇರಿಗೇಷನ್ ಕೆಲಸಗಳಾಗಲಿ, ಕೆನಾಲ್ ಕೆಲಸವಾಗಲಿ ಪ್ರಾರಂಭ ಮಾಡತಕ್ಕಂತಹ ಕಾರ್ಯಕ್ರಮಗಳನ್ನು ಜಾಗ್ರತೆಯಾಗಿ ತೆಗೆದುಕೊಳ್ಳ ಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಮಾಟಾಳ್ ನಾಗರಾಜ್.—ಅಲ್ಲಿ ಒಂದು ಬಕೆಟ್ ನೀರನ್ನು ೭೫ ಪೈಸೆಗೆ ಮಾರುತ್ತಿದ್ದಾರೆ ಎಂದು ತಿಳಿದು ಬಂದಿದೆ. ಅಲ್ಲಿ ಹೋಗಿ ನೋಡಿದರೆ ಯಾರಿಗಾದರೂ ನಿಜವಾದ ಪರಿಸ್ಥಿತಿ ತಿಳಿಯುತ್ತದೆ. ಆದ್ದರಿಂದ ೧೦ ಲಕ್ಷ ಕೊಟ್ಟರುವುದು ಏನೂ ಸಾಲದು.

ಶ್ರೀ ಎಂ ಬಿ. ರಾಮಸ್ವಾಮಿ (ಆನೇಕಲ್).—ಸ್ವಾಮಿ, ನಮ್ಮ ಆನೇಕಲ್ ತಾಲೂಕಿನಲ್ಲಿ ಸಹ ಈ ಬರಗಾಲದಿಂದ ಜನರು ನೀರಿಲ್ಲದೆ, ತಿನ್ನುವುದಕ್ಕೆ ಆಹಾರವಿಲ್ಲದೆ ಸಾಯುತ್ತಿದ್ದಾರೆ. ಜನರು ಅಲ್ಲಿ ಮರದ ಕೊಂಬೆಗಳನ್ನು ಕಡಿದು ಅದರ ಸೊಪ್ಪುಗಳನ್ನು ತಿನ್ನುತ್ತಿದ್ದಾರೆ. ಅದನ್ನು ನೋಡಿದರೆ ನಿಜವಾಗಿಯೂ ಮನುಷ್ಯನಿಗೆ ಕಣ್ಣೀರು ಬರುತ್ತದೆ. ಆದ್ದರಿಂದ ಅಲ್ಲಿ ಕೂಡ ತಕ್ಕ ಪರಿಹಾರ ಕಾರ್ಯಗಳನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ನಮ್ಮ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕ್ಷಾಮ ಪ್ರದೇಶಗಳಿಗೆ ಪರಿಹಾರಗಳನ್ನು ಒದಗಿಸುವ ಬಗ್ಗೆ ಮಾನ್ಯ ಮಂತ್ರಿಯವರು ಇನ್ನೂ ಏನೂ ಹೇಳಿಲ್ಲ. ಮೊನ್ನೆ ರಾಥೋಡ್‌ರವರಿಗೆ ಫೇರಾವೊ ಬೇರೆ ಮಾಡಿದ್ದರು. ಅದರ ಬಗ್ಗೆ ಅವರು ಮುಖ್ಯಮಂತ್ರಿಯವರಿಗೆ ಒಂದು ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ನಮ್ಮ ಸಭೆಯು ಮುಂದೆ ಇಡಬೇಕು. ಅದೇ ರೀತಿ ಆ ಪ್ರದೇಶಗಳಿಗೆ ಏನೇನು ಸವಲತ್ತು ಒದಗಿಸಿದೆ ಎಂಬುದರ ಬಗ್ಗೆ ಒಂದು ಹೇಳಿಕೆಯನ್ನು ಈ ಸಭೆಯು ಮುಂದೆ ಮಾಡಬೇಕೆಂದು ಮತ್ತು ಅಲ್ಲಿಗೆ ಸಾಕಷ್ಟು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಈಗ ಕೆಲವು ಮಾನ್ಯ ಸದಸ್ಯರು ಬರಗಾಲದ ಬಗ್ಗೆ ಹೇಳಿದ್ದಾರೆ. ಅದೇ ರೀತಿ ಕೋಲಾರದಲ್ಲಿ ನಿನ್ನೆ ಒಂದು ಗ್ರಾಮದಲ್ಲಿ ಹೋದಾಗ ಜನರು ತಿನ್ನುವುದಕ್ಕೆ ಆಹಾರವಿಲ್ಲದೆ, ಕುಡಿಯುವುದಕ್ಕೆ ನೀರಿಲ್ಲದೆ ತೊಂದರೆ ಪಡುತ್ತಿದ್ದುದನ್ನು ನೋಡಿದ್ದೇನೆ. ಅದಲ್ಲದೆ ಅವರು ನೀರಿಗಾಗಿ ಒಂದೆರಡು ಮೈಲು ನಡೆದುಕೊಂಡು ಹೋಗಿ ತರಬೇಕಾಗಿದೆ. ಅದೇ ರೀತಿ ಅಲ್ಲಿ ರಾಗಿ ಭತ್ತವನ್ನು ಬೆಳೆಯುವುದಕ್ಕೆ ಮಳೆಯಿಲ್ಲದೆ ಸಾಧ್ಯವಾಗಿಲ್ಲ. ಕೋಲಾರ ಜಿಲ್ಲೆಯಲ್ಲಿ ಆಗಿಂದಾಗ್ಗೆ ಈ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ರಾಯಲಸೀಮೆಯಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಏನೊಂದು ಯೋಜನೆಯನ್ನು ಆಂಧ್ರ ಸರ್ಕಾರದವರು ಹಾಕಿಕೊಂಡು ಅದೇ ರೀತಿಯಲ್ಲಿ ಕೋಲಾರ ಮತ್ತು ಚಿತ್ರದುರ್ಗ ಕಡೆಗಳಲ್ಲಿ ಒಂದು ಶಾಶ್ವತವಾದ ರೀತಿಯಲ್ಲಿ ಪರಿಹಾರ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಹೀಗೆ ಬಿಟ್ಟರೆ ಪರಿಸ್ಥಿತಿ ಉಲ್ಬಣಗೊಳ್ಳುತ್ತದೆ. ಅದೇ ರೀತಿಯಲ್ಲಿ ತಾಲೂಕುಗಳಲ್ಲಿ ಈ ಪರಿಸ್ಥಿತಿ ಬರುವಾಗ ಖರ್ಚು ಮಾಡುವುದಕ್ಕೆ ಸಹ ಅವಕಾಶ ಮಾಡಿಕೊಡಬೇಕು. ಆದ್ದರಿಂದ ಸರ್ಕಾರದವರು ಇದನ್ನು ಬಹಳ ತೀವ್ರವಾಗಿ ಆಲೋಚನೆ ಮಾಡಿ ಒಂದು ಪರಿಹಾರವನ್ನು ಕಂಡುಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಇದರ ಬಗ್ಗೆ ನಾನು ರೂಲ್ ೫೦ರ ಪ್ರಕಾರ ಒಂದು ಮೋಷನ್ ಕಳಿಸಿದ್ದೇನೆ. ಅದನ್ನು ಸಹ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

2-30 P.M.

STATAMENT BY THE CHIEFMINSTER

re : Steps taken to met the Scartiy conditions in Bijapur District

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಮ್ಮ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಒಂದು ಹೇಳಿಕೆಯನ್ನು ಕೊಡುತ್ತಾರೆ. ಅವರು ಈಗ ಬೇಲ್ಮನೆಗೆ ಹೋಗಿದ್ದಾರೆ. ಅವರು ಎಲ್ಲಾ ವಿಷಯಗಳನ್ನೂ ಇಗೊಂಡಂತೆ ಅಂಕಿ ಅಂಶಗಳನ್ನು ಪಡೆದು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಇಂದು ಕೆಲವು ಮಾಹಿತಿಗಳನ್ನು ಪಡೆಯುತ್ತಿದ್ದಾರೆ. ಅದಕ್ಕಾಗಿ ಇನ್ನೂ ಎರಡು ದಿವಸಗಳು ಬೇಕೆಂದು ಹೇಳಿ ಹೋಗಿದ್ದಾರೆ ಅವರು ಈ ಸಭೆಯ ಮುಂದೆ ಅಂಕಿ ಅಂಶಗಳನ್ನು ಕೊಡುವುದು ನಿಧಾನವಾದರೆ ನಾವು ತೆಗೆದುಕೊಳ್ಳುವ ಕ್ರಮಗಳಂತೂ ನಿಧಾನವಾಗಬೇಕಾಗಿಲ್ಲವೆಂದು ನಾನು ತಿಳಿದಿದ್ದೇನೆ. ಈಗ ಮೊನ್ನೆ ತಾನೇ ನಾನು ಒಂದು ಸಭೆಯನ್ನು ಕರೆದು ಬಿಜಾಪುರ ಜಿಲ್ಲೆ ಸದಸ್ಯರನ್ನು ಕಂಡು ಅಲ್ಲಿನ ವಿಚಾರಗಳನ್ನು ಅವರಿಂದ ತಿಳಿದುಕೊಂಡು ಜನರಿಗೆ ಕೆಲಸ ಒದಗಿಸುವ ದೃಷ್ಟಿಯಿಂದ ಯಾವ್ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಬಗ್ಗೆ ಚರ್ಚೆಮಾಡಿ ಅದರಂತೆ ಆಜ್ಞೆ ಮಾಡಿದೆ. ಆ ಸಭೆಯಲ್ಲಿ ಶ್ರೀಮಾನ್ ಎಸ್. ವೈ. ಪಾಟೀಲರವರು ಸ್ವಲ್ಪಹೊತ್ತು ಇದ್ದು ಆಮೇಲೆ

ಹೊರಟುಹೋದರು ಆದರೆ ಮಾನ್ಯ ಶ್ರೀ ಕಬಾಡಿಯವರು ಮಾತ್ರ ಇದ್ದರು. ಕ್ರಮ ತೆಗೆದುಕೊಂಡರೋ ಇಲ್ಲವೋ ಗೊತ್ತಿಲ್ಲವೆಂದು ಅವರು ಅನುಮಾನ ಪಡುವುದು ಏಕೆ ಎಂದು ನನಗೆ ಅನುಮಾನ. ದುಡ್ಡು ಕೊಟ್ಟಿಲ್ಲವೇದಂ ಯಾರು ಹೇಳುತ್ತಾರೆ ?

ಶ್ರೀ ಜೆ. ಎಲ್. ಕಬಾಡಿ.—ಕೂಲಿಗಾರರಿಗೆ ಸಂಬಳ ಕೊಟ್ಟರೆ ಸಾಕೇ ?

ಶ್ರೀ ಎಸ್. ವೈ. ಪಾಟೀಲ್.—ಎಷ್ಟು ಕೊಟ್ಟಿದ್ದಾರೆ ? ಜನಗಳಿಗೆ ಬೇಕಾಗುವಷ್ಟು ಕೊಟ್ಟರೆ ಸಾಕು.

ಶ್ರೀ ಡಿ ದೇವರಾಜು ಅರಸ್.—ಅಲ್ಲಿ ಕೆಲಸಗಳನ್ನು ಯಾವರೀತಿಯಾಗಿ ಒದಗಿಸಬೇಕೆಂಬುದನ್ನೂ ಸಹ ಚರ್ಚೆಮಾಡಿದ್ದೇನೆ. ಅಲ್ಲಿ ಹುಲ್ಲಿನ ಅಭಾವ ಇದೆ. ದನಕರುಗಳ ಮೇವಿನ ಅಭಾವವೂ ಇದೆಯೆನ್ನುವುದನ್ನು ತಿಳಿಸಲು ಬಿಜಾಪುರ ಜಿಲ್ಲೆಯಂ ಹೆಚ್ಚು ಸದಸ್ಯರು ಬಂದಿದ್ದರು. ಅವರೂ ನಾವೂ ಕುಳಿತಂ ಆಲೋಚನೆ ಮಾಡಿದೆವು. ಕೂಡಲೇ ಮೇವನ್ನು ಒದಗಿಸುವುದು ಬಹಳ ಕಷ್ಟವಿದೆಯೆಂದು ಹೇಳಿದ್ದೇನೆ. ದನಗಳ ಮೇವು ಬಿಜಾಪುರ ಜಿಲ್ಲೆಯಿಂದ ಹೊರಗಡೆ ಮಾರಾಟಕ್ಕೆ ಹೋಗುತ್ತಿದೆಯೆಂಬುದು ಗೊತ್ತಿದೆ. ಆದ್ದರಿಂದ ಅದನ್ನು ಕೂಡಲೇ ನಿಲ್ಲಿಸಬೇಕು. ಆಹಾರ ಧಾನ್ಯಗಳು ಹೊರಗಡೆ ಹೋಗುವುದನ್ನು ಮತ್ತು ದನಗಳ ಮೇವು ಹಾಗೂ ಜೋಳದ ಕಡ್ಡಿ ಹೊರಗೆ ಹೋಗುವುದನ್ನು ನಿಲ್ಲಿಸಬೇಕು, ಎಂದು ಅದೇ ರೀತಿಯಲ್ಲಿ ಆಜ್ಞೆ ಮಾಡಿದೆ. ಮೇವನ್ನು ಕೊಂಡುಕೊಳ್ಳುವವರಿಗೆ ಸರ್ಕಾರದಿಂದ ಸಾಲ ಕೊಡುವ ತೀರ್ಮಾನ ಮಾಡಿದ್ದೇವೆ. ಆ ರೀತಿಯಾಗಿ ನಾವು ಆಜ್ಞೆ ಮಾಡಿದ್ದೇವೆ. ಅಲ್ಲಿ ಕುಡಿಯುವ ನೀರಿನ ಬಾವಿಗಳದ್ದು ನೀರಿಲ್ಲ. ಅಲ್ಲಿ ಬಾವಿಗಳನ್ನು ಆಳಪಡಿಸುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಆದೇಶ ಕೊಟ್ಟಿದೆ. ಅವರು ಎಷ್ಟುಬೇಕಾದರೂ ಆಳಪಡಿಸಬಹುದು. ಅದರಲ್ಲಿ ಮಿತಿ ಇಲ್ಲ. ಅದರ ಬಗ್ಗೆ ಪೂರ್ಣಾಧಿಕಾರವನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟಿದೆ. ರಿಗ್ಸ್ ನಮ್ಮಲ್ಲಿ ಹೆಚ್ಚಿಗೆ ಇಲ್ಲ. ೨೧ ಯಂತ್ರಗಳನ್ನು ಸರ್ವಿಸ್‌ನಲ್ಲಿಟ್ಟುಕೊಂಡಿದ್ದರೂ ಅವುಗಳಲ್ಲಿ ೮ ಕೆಲಸ ಮಾಡದೆ ಹಾಗೆಯೇ ಇವೆ. ಅವಕ್ಕೆ ಆಗಿಂದಾಗ್ಗೆ ಸ್ಪೇರ್‌ಪಾರ್ಟ್ಸ್ ಬೇಕಾಗಿವೆ. ಇದರಿಂದ ನಮಗೆ ಬಹಳ ಕಷ್ಟವಾಗಿ ಎಲ್ಲಾ ಕಡೆಯೂ ಸರ್ವಿಸ್ ಮಾಡುವುದಕ್ಕೆ ಅಸಾಧ್ಯವಾಗಿದೆ. ಜನಗಳಿಗೆ ಆಹಾರವಿಲ್ಲದೆ ಬಹಳ ತೊಂದರೆಯಾಗಿದೆ ಎಂದು ಹೇಳುತ್ತಾರೆ. ಜೋಳ ಸಾಕಷ್ಟು ಇಲ್ಲ. ಅಲ್ಲಿ ಹೆಚ್ಚಿಗೆ ಬೇಕಾಗಿರುವುದು ಜೋಳ. ಅದೇ ಅಲ್ಲಿ ರೂಢಿ. ಅದಕ್ಕೆ ನಾನಾಕಾರಣಗಳಿವೆ. ಈ ಸಂದರ್ಭದಲ್ಲಿ ಕೆಲವು ಕಾರಣಗಳನ್ನು ಹೇಳುವುದು ಬಹಳ ಒಳ್ಳೆಯದು. ಏಕೆಂದರೆ ನಮ್ಮಲ್ಲಿ ಕ್ಷಾಮ ಬಂದು ಮಳೆ ಇಲ್ಲದೆ ಅಭಾವ ಬಂದಾಗ್ಗೆ ಆಹಾರ ಇಲ್ಲ. ಬೆಳೆ ಬೆಳೆದಾಗ ರೈತರ ಹತ್ತಿರ ತೆಗೆದುಕೊಳ್ಳಬೇಡಿ ನಾವು ಲೆವಿ ಎಂದೇನು ಹೇಳುತ್ತೇವೆಯೋ ಅದನ್ನು ಹಾಕುವುದು ಬೇಡವೆಂದು ಹೇಳಿದ್ದು ಈಗ ಅವರಿಗೆ ತೊಂದರೆ ಇದ್ದಾಗ ನಿಜವಾಗಿ ಆಹಾರವನ್ನು ಒದಗಿಸಿಕೊಡಬೇಕೆಂದು ಹೇಳುತ್ತಾರೆ. ಅದು ಹೇಗೆ ಸಾಧ್ಯ ? ಕೇಂದ್ರ ಸರ್ಕಾರದವರು ಹೆಚ್ಚಿಗೆ ಜೋಳ ಇಟ್ಟಿಲ್ಲ. ನಾವು ಈಗ ಲೆವಿ ಮುಖೇನ ಪಡೆದಿರುವ ಎಷ್ಟು ಧಾನ್ಯ ನಮ್ಮಲ್ಲಿದೆಯೋ ಅದನ್ನು ಈಗ ಕೊಡುವುದಕ್ಕೆ ಏರ್ಪಾಡುಮಾಡಬೇಕು. ಆದರೆ ಎಷ್ಟು ಬೇಕಾದರೂ ಗೋಧಿ ಸಿಗುತ್ತದೆ ಗೋಧಿಯನ್ನು ಕೊಡಲು ನಾನು ಈಗಾಗಲೇ ಏರ್ಪಾಡು ಮಾಡಿದ್ದೇನೆ. ಬಿಜಾಪುರ ಜಿಲ್ಲೆಯಲ್ಲಾಗಲೀ ಅಥವಾ ಎಲ್ಲಿ ಆಹಾರದ ಕೊರತೆ ಇದೆಯೋ ಅಲ್ಲಿಗೆ ಎಷ್ಟು ಬೇಕಾದರೂ ಗೋಧಿಯನ್ನು ಕೊಡುವುದಕ್ಕೆ ಸಾಧ್ಯತೆ ಇದೆ. ಆದ್ದರಿಂದ ಆಹಾರ ಧಾನ್ಯಗಳಿಗೆ ಚಿಂತೆ ಮಾಡುವುದು ಬೇಡ. ಈಗ ಸಾಕಷ್ಟು ಆಹಾರಧಾನ್ಯಗಳಿಲ್ಲ. ಇನ್ನು ಕೆಲವು ಕಡೆ ವರ್ತಕರು ಈ ಒಂದು ಸಮಯವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಇವರೂ ಸಹ ಸ್ಪೇರ್ ಮಾಡಿಟ್ಟುಕೊಂಡು ಬೆಲೆ ಏರಿಸುತ್ತಿದ್ದಾರೆ. ಆದಕ್ಕೆ ನಾನು ಏನಾ ಯೋಚನೆ ಮಾಡುತ್ತಿದ್ದೇನೆಂದರೆ ಗೋಧಿಯನ್ನು ಹೆಚ್ಚು ಪ್ರಮಾಣದಲ್ಲಿ ಮೂವ್ ಮಾಡಲು ನಾವು ಅದಕ್ಕೆ ಸಾಕಷ್ಟು ಪ್ರಚಾರ ಮಾಡೋಣ. ನಮ್ಮ ಮೈಸೂರು ರಾಜ್ಯದಲ್ಲಿ ಯಾವ್ಯಾವ ಕಡೆಗಳಲ್ಲಿ ಯಾವ್ಯಾವ ಆಹಾರ ಧಾನ್ಯಗಳು ಹೇರಳವಾಗಿ ಸಿಗುತ್ತವೆ ಎಂಬುದನ್ನು ನೋಡಬೇಕು. ಕೇಂದ್ರ ಸರ್ಕಾರದಲ್ಲಿ ೮ ಮಿಲಿಯನ್ ಟನ್‌ಗಳಷ್ಟು ಗೋಧಿ ಸ್ಟಾಕ್ ಇದೆ. ಆದಕ್ಕೆ ಏನೂ ಕಳವಳ ಬೇಡ. ಆಹಾರ ಧಾನ್ಯಗಳು ಸಿಗುವುದಿಲ್ಲವೆಂದು ಯೋಚನೆ ಮಾಡುವ ಅಗತ್ಯವಿಲ್ಲ ನಾವು ಹೇಳುತ್ತಾ ಹೇಳುತ್ತಾ ಅದನ್ನು ಭದ್ರಮಾಡುತ್ತಿದ್ದಾರೆ. ನಮ್ಮಲ್ಲಿ ಎರಡು ಮೂರು ಕೆಲಸಗಳು ನಡೆಯುತ್ತಿವೆ. ಜೋಳ ಬೆಳೆದಾಗಲೆಲ್ಲಾ ಬೆಳದಂಥ ರೈತರು ಕಾನೂನಿಂದ ತಪ್ಪಿಸಿಕೊಳ್ಳುವುದಕ್ಕೆ ನಮ್ಮಲ್ಲಿ ಏನೂ ಈ ಸಾರಿ ಬೆಳೆಯಲಿಲ್ಲ, ನೀವು ಲೆವಿ ತೆಗೆದುಕೊಳ್ಳಬೇಡಿ ಎಂದು ಹೇಳಿ ಆಗಿದ್ದನ್ನು ಬಚ್ಚಿಟ್ಟುಕೊಳ್ಳುವುದಕ್ಕೆ ಹೋಗುತ್ತಾರೆ. ಬಿಜಾಪುರ, ಸೋಲಾಪುರ, ಮತ್ತು, ಮುಂಗಳೂರು ಮುಂತಾದ ಪ್ರದೇಶಗಳಿಗೆ ಅಕ್ಕಿ ಕಳುಹಿಸುತ್ತಾರೆ. ಆದ್ದರಿಂದ ಇನ್ನುಮುಂದೆ ಲೆವಿ ವಿಚಾರ ಬಂದಾಗ ಏನು ಮಾಡಬೇಕೆಂಬುದನ್ನು ಸೀರಿಯಸ್ಸಾಗಿ ಯೋಚನೆ ಮಾಡಬೇಕು. ಈಗ ಆಹಾರ ಬೇಕಾದರೂ ಲೆವಿ ವಸೂಲು ಮಾಡುವಾಗ ಯಾರೂ ತಡೆಯುವುದಕ್ಕೆ ಬರಬಾರದು.

ಶ್ರೀ ಎಸ್. ವೈ. ಪಾಟೀಲ್.—ಲೆವಿ ಬರುತ್ತಾ ಇದ್ದಂಥ ಕೆಲವು ಕಡೆ ಕೇವಲ ಹುಲ್ಲಂ ಬಿದ್ದಿದೆ. ಬೆಂಕಿ ಬಿದ್ದಿದೆ.

ಶ್ರೀ ಡಿ. ದೇವರಾಜ್ ಅರಸ್.—ನೀವು ಸರಿಯಾಗಿ ವಿಚಾರ ತಿಳಿದುಕೊಳ್ಳಲಿ ಎಂದು ನಾನು ಹೇಳುತ್ತಿದ್ದೇನೆ. Let us not run any more with the hare and hunt with the hound.

ಶ್ರೀ ಎಸ್. ವೈ. ಪಾಟೀಲ್.—ಆದಂ ಸರಿಯಾಗಿ ನಡೆದಿದ್ದರೆ, ಇವತ್ತು ಇನ್ನೂ ಹೆಚ್ಚಿಗೆ ಪ್ರಮಾಣದಲ್ಲಿ ಜೋಳ ಸಿಗಂತ್ತಿತ್ತು. ಆದರಲ್ಲಿ ಸರ್ಕಾರದ್ದೇ ತಪ್ಪು ಇರುವುದಂ.

ಶ್ರೀ ಎಚ್. ಡಿ. ದೇವೇಗೌಡ.—ಹೋದ ವರ್ಷ ನೀವೂ ಇರಲಿಲ್ಲ, ನಾವೂ ಇರಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಹಿಂದಿನಿಂದಲೂ ಮಾನ್ಯ ಶ್ರೀ ದೇವೇಗೌಡರು ಮಾಡಿರುವುದು ಈಗಲೂ ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಆದು ನನಗೆ ಗೊತ್ತಿದೆ. ಎಷ್ಟೋ ಜನರು ಅರ್ಜಿಗಳನ್ನು ತೆಗೆದುಕೊಂಡು ಬಂದು ನನಗೆ ಹೇಳುತ್ತಿದ್ದರು. ನಾನು ಆ ಮಾತನ್ನು ಯಾರೊಬ್ಬರ ನಿಂದನೆಗೆ ಹೇಳುತ್ತಾ ಇಲ್ಲ. ನಾವು ಸ್ವಲ್ಪ ವಿವೇಚನೆ ಉಪಯೋಗಿಸದೆ ಯಾರೋ ಹೇಳುತ್ತಿದ್ದಾರೆ ಎಂದು ಅವರ ಪರವಾಗಿ ಕೆಲಸ ಕಾರ್ಯಗಳು ಮಾಡುವಾಗ ಬಡವರಿಗೆ ಆಗುತ್ತಿರುವ ತೊಂದರೆಗಳೇನು ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮಲ್ಲಿ ಗೋಧಿ ಸಾಕಷ್ಟು ಇದೆ. ಯಾರು ಆಹಾರ ವಿಲ್ಲದೆ ಸಾಯುತ್ತಿದ್ದಾರೋ ಅಂತಹವರಿಗೆ ಸಾಯುವುದಕ್ಕೆ ಅವಕಾಶ ಕೊಡುವ ಪರಿಸ್ಥಿತಿ ಇಲ್ಲ. ಸಾಕಷ್ಟು ಗೋಧಿ ಇದೆ ಅವರಿಗೆ ಎಲ್ಲಿ ಕೆಲಸಗಳನ್ನು ಒದಗಿಸಬೇಕೋ ಅಲ್ಲಿಯೇ ಒದಗಿಸೋಣ. ಮಾನ್ಯ ಶ್ರೀ ಕಬಾಡಿಯವರು ಹೇಳಿದ ಹಾಗೆ ನಮ್ಮ ಇಂಟೆರಿಂ ಬಡ್ಜೆಟ್‌ನಲ್ಲಿ ಸ್ವಲ್ಪ ಹಣವನ್ನು ಈ ಬಾಬಿಗೆ ಒದಗಿಸಿದೆ. ಈಗ ಸ್ವಲ್ಪ ತಡವಾಗಿದೆ. ಅಪ್ರೋಪ್ರಿಯೇಷನ್ ಬಿಲ್ ಮುಗಿಯುವವರೆಗೂ ದುಡ್ಡು ಕೊಡುವುದಕ್ಕಾಗ ಲಿಲ್ಲ. ಈಗ ಮಂಜೂರು ಆಯಿತು. ಈ ಒಂದು ಕೋಟಿ ರೂಪಾಯಿಗಳನ್ನು ೬ನೇ ಫ್ಯಾಮಿನ್ ಕೆಳಗೆ ತಕ್ಷಣದಲ್ಲಿ ರಿಲೀಜ್ ಮಾಡಿ ಎಲ್ಲಾ ಕಡೆಯೂ ಕೆಲಸ ಕಾರ್ಯಗಳನ್ನು ಒದಗಿಸಂವುದಕ್ಕೆ ಪ್ರಯತ್ನಮಾಡಿ ಎಂದು ಹೇಳಿದೆ.

ಇದರ ಜೊತೆಯಲ್ಲೇ ಈಗ ಬಿಜಾಪುರ ಜಿಲ್ಲೆಯಲ್ಲಿ ಮೂರು ನಾಲ್ಕು ರೀತಿಯಲ್ಲಿ ಜನರಿಗೆ ಕೆಲಸವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಅಲ್ಲಿ ಕೆಲವು ಕಡೆ ರಸ್ತೆಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಮೊನ್ನೆ ಅಲ್ಲಿಗೆ ನಮ್ಮ ಪಿ. ಡಬ್ಲ್ಯೂ. ಡಿ. ಮಂತ್ರಿಗಳು ಹೋಗಿದ್ದಾಗ ಅಲ್ಲಿ ಜನರಿಗೆ ಕೆಲಸಗಳನು ಒದಗಿಸತಕ್ಕ ಬಗ್ಗೆ ಕೂಡಲೆ ರಸ್ತೆ ಕಾಮಗಾರಿಗಳನ್ನು ಪ್ರಾರಂಭ ಮಾಡಬೇಕೆಂದು ಆಜ್ಞೆಯನ್ನು ಕೊಟ್ಟಿದ್ದಾರೆ. ಬಿಜಾಪುರ ಜಿಲ್ಲೆಯಂ ಏಳು ತಾಲ್ಲೂಕುಗಳಲ್ಲಿ ಯಾವುವು ಕ್ಷಾಮಕ್ಕೆ ಹೆಚ್ಚಿಗೆ ತುತ್ತಾಗಿವೆ/ ಆ ತಾಲ್ಲೂಕುಗಳಲ್ಲಿ ಆದರಲ್ಲೂ ಹೆಚ್ಚಿಗೆ ಇಂಡಿ ಮತ್ತು ಸಿಂಧಗಿ ತಾಲ್ಲೂಕುಗಳಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ ಎಂಬುದನ್ನು ಒಪ್ಪುತೇನೆ. ಹಾಗೆ ಎಲ್ಲಿಲ್ಲಿ ಜನರ ಕಷ್ಟ ಹೆಚ್ಚಾಗಿದೆ ಜನರು ಎಲ್ಲಿ ಸ್ವಲ್ಪ ಚೇತರಿಸಿಕೊಂಡಿದ್ದಾರೆ, ಅನ್ನುವುದನ್ನು ನೋಡಿ ಪರಿಸ್ಥಿತಿಗನುಸಾರವಾಗಿ ಅಯಾ ಸ್ಥಳಗಳಿಗೆ ಪ್ರಯಾರಿಟಿ ಕೊಟ್ಟು ಕೆಲಸಗಳನ್ನು ಒದಗಿಸುತ್ತೇವೆ. ಎಲ್ಲಿ ಜನರಿಗೆ ದೊಡ್ಡ ಪ್ರಮಾಣದಲ್ಲಿ ಕೆಲಸಗಳು ಬೇಕಾಗಿವೆ, ಎಲ್ಲಿ ಕೆಲಸಗಳು ಕಡಿಮೆ ಮಟ್ಟದಲ್ಲಿ ಜನರಿಗೆ ಬೇಕೆಂಬುದನ್ನು ನೋಡಿ ಕೆಲಸಗಳನ್ನು ಒದಗಿಸಲಾಗುತ್ತದೆ.

ಇನ್ನು ರಸ್ತೆ ಕೆಲಸಗಳಾದ ಮೇಲೆ ಜನರಿಗೆ ಒದಗಿಸಬಹುದಾದ ಕೆಲಸ ಎಂದರೆ ಸಾಯಿಲ್ ಕನ್‌ಸರ್ವೇಷನ್ ಕೆಲಸ. ಇದನ್ನು ಎಲ್ಲಾ ಕಡೆಗಳಲ್ಲೂ ತೆಗೆದುಕೊಳ್ಳಬಹುದು. ಅಲ್ಲಿ ಎಲ್ಲ ಕಡೆಗಳಲ್ಲೂ ಈ ಕೆಲಸವನ್ನೂ ಕೂಡ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳಿಗೆ ನಾವು ತಿಳಿಸಿದ್ದೇವೆ. ಆದರೆ ಕೆಲವು ಭಾಗಗಳಿಗೆ ಇದರ ಆವಶ್ಯಕತೆ ಅಷ್ಟಾಗಿಲ್ಲವೆಂದು ಕಾಣುತ್ತದೆ ಅಲ್ಲದೆ ಈ ಕೆಲಸಕ್ಕೆ ಅಗತ್ಯವಾಗಿ ಲೆವಲಿಂಗ್ ಇನ್‌ಸ್ಟ್ರುಮೆಂಟ್ ಒಂದು ಬೇಕಾಗಿದೆ. ಅದನ್ನೂ ಒದಗಿಸೋಣ. ಇನ್ನು ಅಲ್ಲಿ ಜನರಿಗೆ ಕೆಲಸ ಕೊಟ್ಟ ಮೇಲೆ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸೂಪರ್‌ವೈಜ್ ಮಾಡಲು ಜನರಿಗೆ ೧೫ ದಿನಗಳ ಒಂದು ಶಿಕ್ಷಣವನ್ನು ಕೊಡುವುದಕ್ಕೂ ವ್ಯವಸ್ಥೆ ಮಾಡಲಾಗುವುದು. ಈ ಎಲ್ಲ ಕಾರ್ಯಗಳಿಗೂ ಈಗಾಗಲೇ ಬಡ್ಜೆಟ್ಟಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇನ್ನೂ ಸ್ವಲ್ಪ ಹಣ ಜಾಸ್ತಿಯಾದರೂ ಚಿಂತೆ ಇಲ್ಲ ಒದಗಿಸುತ್ತೇವೆ ಇನ್ನು ನಮ್ಮ ಪಾಟೀಲರು ಇಂಡಿ ಮತ್ತು ಸಿಂಧಗೀ ತಾಲ್ಲೂಕುಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಕೆಲಸವೇನೂ ಬೇಕಾಗಿಲ್ಲ, ಅಲ್ಲಿ ಒಂದು ಸಾವಿರ ಬಾವಿಗಳನ್ನು ತೆಗೆಸಿಕೊಟ್ಟರೆ ಸಾಕೆಂದು ನನ್ನ ಹತ್ತಿರ ಬಂದು ತಿಳಿಸಿದ್ದಾರೆ. ಅದಕ್ಕೆ ನಾನು ಈಗ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನವರಿಗೆ ಸರ್ಕಾರದ ಪರವಾಗಿ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟರೆ ಅವರು ಅದರ ಜೊತೆಗೆ ಒಂದು, ಒಂದೂವರೆ ಕೋಟಿ ಹಾಕಿ ಹಣವನ್ನು ಜನರಿಗೆ ಸಾಲವಾಗಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆ

ಕಾರ್ಯಕ್ರಮವನ್ನು ಸರ್ಕಾರದವರು ಕೈಗೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಅದಕ್ಕೆ ನಾನು ಶ್ರೀಮಾನ್ ಪಾಟೀಲರಿಗೇ ಹೇಳಿದ್ದೇನೆ. ನಿಮಗೆ ಎಲ್ಲಿ ಎಷ್ಟು ಬಾವಿಗಳನ್ನು ತೆಗೆಸಬೇಕೋ ಅಷ್ಟು ಜನರ ಅರ್ಜಿಯನ್ನೂ ನೀವೇ ಶೇಖರಣೆ ಮಾಡಿ ಅದಕ್ಕೆ ನಡೆಸಬೇಕಾದ ಎಲ್ಲಾ ಶಾಸ್ತ್ರಗಳನ್ನು ನಡೆಸಿ, ತಯಾರುಮಾಡಿಸಿ, ಅಲ್ಲೇ ಸ್ಥಳದಲ್ಲೇ ಸಂಬಂಧಪಟ್ಟ ಅಧಿಕಾರಿಗಳನ್ನೆಲ್ಲಾ ಬರಮಾಡಿಕೊಂಡು ಅಂದರೆ ಡಿ. ಸಿ. ಮತ್ತು ತಾಶೀಲ್ದಾರರನ್ನು ಇಟ್ಟುಕೊಂಡು ಅಲ್ಲಿಯೇ ಅಜ್ಜಿ ಮಾಡುವಂತೆ ಮಾಡುವುದಾಗಿ ತಿಳಿಸಿದ್ದೇನೆ. ಹೀಗೆ ಅಲ್ಲಿ ರಸ್ತೆ ಕೆಲಸ, ಸಾಯಿಲ್ ಕನ್‌ಸರ್ವೇಷನ್ ಮತ್ತು ಬಾವಿಗಳ ಕೆಲಸ ಇಷ್ಟನ್ನು ಮಾಡುವುದಲ್ಲದೆ, ಅಲ್ಲಿ ಮೈನರ್ ಇರಿಗೇಷನ್ ಕೆಲಸ ಮಾಡುವುದಕ್ಕೆ ಎಲ್ಲೆಲ್ಲಿ ಸಾಧ್ಯತೆ ಇದೆ, ಎಲ್ಲೆಲ್ಲಿ ಅಂಥ ಕೆಲಸಗಳು ಮಂಜೂರಾಗಿವೆ ಎಂಬುದನ್ನು ನೋಡಿ ಅವುಗಳನ್ನು ಕೈಗೊಳ್ಳುವುದಕ್ಕೂ ಏರ್ಪಾಡನ್ನು ಮಾಡಲಾಗುತ್ತದೆ. ಇನ್ನು ಬಿಜಾಪುರ ಜಿಲ್ಲೆಯಲ್ಲಿ ಸ್ಮಾಲ್ ಫಾರ್ಮ್‌ಸ್ ಫೋರಂಗಳೆಂದು ಇವೆ. ಅವುಗಳಿಗೂ ಮತ್ತು ಲ್ಯಾಂಡ್ ಆರ್ಮಿ ಅವುಗಳಿಗೂ ಈ ರೂರಲ್ ವರ್ಕ್ಸ್‌ಅನ್ನು ತೆಗೆದುಕೊಳ್ಳುವಂತೆ ತಿಳಿಸಲಾಗುತ್ತದೆ. ಒಟ್ಟಿನಲ್ಲಿ ಜನರಿಗೆ ಕೆಲಸ ಒದಗಿಸುವುದಕ್ಕೆ ಏನೇನು ಪ್ರಯತ್ನಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡಲಾಗುತ್ತದೆ. ಜನರಿಗೆ ಬಹಳ ಮುಂಖ್ಯವಾಗಿ ಬೇಕಾಗತಕ್ಕ ಅನ್ನ ನೀರು ಅದರಲ್ಲೂ ಜನರಿಗೆ ಕುಡಿಯುವ ನೀರನ್ನು ಒದಗಿಸತಕ್ಕ ಕೆಲಸ ಇವುಗಳಿಗೆ ಆದ್ಯತೆಯನ್ನು ಕೊಡಲಾಗುತ್ತದೆ.

ಇನ್ನು ಅಲ್ಲಿ ದನಕರುಗಳಿಗೆ ಸೊಪ್ಪನ್ನು ಕತ್ತರಿಸಿ ಹಾಕುತ್ತಿದ್ದಾರೆಂದು ಹೇಳಿದರು. ಹಾಗೆ ಸೊಪ್ಪನ್ನು ಹಾಕತಕ್ಕದ್ದು ಹೊಸದೇನೂ ಅಲ್ಲ. ಅದು ಬಹಳ ದಿನಗಳಿಂದಲೂ ಇದೆ. ಆದರೆ ಬಿಜಾಪುರದಲ್ಲಿ ದನಗಳಿಗೆ ಸೊಪ್ಪು ಕೂಡ ಸಿಕ್ಕುವುದಿಲ್ಲ. ಈ ದಿವಸ ಆ ಜಾನುವಾರುಗಳಿಗೆ ಮೇವನ್ನು ಒದಗಿಸುವುದಕ್ಕೆ ಸ್ವಲ್ಪ ಕಷ್ಟವೇ. ಕಾರಣ ಇದು ಸೀಜನ್ನಲ್ಲ. ಗಂಗಾವತಿ ಗದ್ದೆ ಬಯಲಿನಲ್ಲಿ ಹುಲ್ಲು ಸಿಕ್ಕುವುದು ಬಹಳ ಕಷ್ಟ. This is the end of the season ಕೆಲವು ಕಡೆ ಸಿಕ್ಕಿದರೂ ಧಾರಣೆ ಒಂದಕ್ಕೆ ಹತ್ತರಷ್ಟನ್ನು ಕೊಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಇದನ್ನು ಸರಬರಾಯಿ ಮಾಡತಕ್ಕ ಬಗ್ಗೆ ಏನಾದರೂ ದುಡ್ಡನ್ನು ಕೊಟ್ಟರೆ ಅದರಿಂದ ಕಷ್ಟದಲ್ಲಿರತಕ್ಕ ರೈತನಿಗೇನೂ ಸಹಾಯವಾಗುವುದಿಲ್ಲ. ದುಡ್ಡು ಮಧ್ಯವರ್ತಿ ಜನರ ಜೇಬಿಗೆ ಬೀಳುತ್ತದೆ. ಇತ್ತ ಸರ್ಕಾರಕ್ಕೂ ನಷ್ಟ ಅತ್ತ ಜಾನುವಾರಂಗಳಿಗೂ ಅನುಕೂಲವಾಗುವುದಿಲ್ಲ. ಆದ್ದರಿಂದ ಜೋಳದ ಕಡ್ಡಿಗೆ ಸ್ಥಳದಲ್ಲಿ ಬೆಲೆ ಸ್ವಲ್ಪ ಜಾಸ್ತಿಯಾದರೂ ಚಿಂತೆಯಿಲ್ಲ ನೇರವಾಗಿ ಆ ರೈತರೇ ಕೊಳ್ಳುವಂತೆ ಅವರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಅವರಿಗೆ ತಕಾವಿ ಸಾಲದ ಮೂಲಕ ಹಣವನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ನಾನು ಹೇಳುತ್ತಿರುವುದು ಎಲ್ಲೆಲ್ಲಿ ಈ ಅನಾನುಕೂಲಗಳಿವೆಯೋ ಆ ಸ್ಥಳಗಳಿಗೆಲ್ಲಾ ಅನ್ವಯಿಸುತ್ತದೆ.

ಇನ್ನು ಕುಡಿಯುವ ನೀರಿನ ಅಭಾವ ಪರಿಹಾರದ ಬಗ್ಗೆ ಇರತಕ್ಕ ಬಾವಿಗಳನ್ನು ಆಳಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಪೂರ್ಣಾಧಿಕಾರವನ್ನು ಕೊಡಲಾಗಿದೆ ಕೆರೆ ಅಂಗಳದಲ್ಲಿ ಹಂಗಾಮಿಯಾಗಿ ಬಾವಿಗಳನ್ನು ತೆಗೆಸಲು ೨ ಸಾವಿರ ರೂಪಾಯಿಗಳವರೆಗೂ ಖರ್ಚುಮಾಡುವುದಕ್ಕೆ ಅವಕಾಶ ಇತ್ತು. ಈಗ ಅದನ್ನು ಮೂರು ಸಾವಿರಕ್ಕೆ ಏರಿಸಲಾಗಿದೆ. ಈ ಬಾಬಿಗೆ ಒಂದು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಹೀಗೆ ಜನರ ಕಷ್ಟ ನಿವಾರಣೆಗಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.— ತಮ್ಮ ಮಾತನ್ನು ಕೇಳಿ ನಮಗೆಲ್ಲರಿಗೂ ಬಹಳ ಆನಂದವಾಗಿದೆ. ಆದರೆ ಅಲ್ಲಿ ಇನ್ನೂ ಸಾಕ್ಷಾತ್ತಾಗಿ ಕೆಲಸಗಳು ಪ್ರಾರಂಭವಾಗಿಲ್ಲ.

† ಶ್ರೀ ಎಚ್.ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಆಕ್ಚುಯಲ್ಲಾಗಿ ಕೆಲಸ ಶುರುವಾಗಿಲ್ಲವೆಂದು ಶ್ರೀ ಪಾಟೀಲರು ಕಳಕಳಿಯಿಂದ ಹೇಳುತ್ತಿದ್ದಾರೆ. ಯಾವ ಊರಿನಲ್ಲಿ ಎಷ್ಟು ಜನರಿಗೆ ಕೆಲಸ ಬೇಕೋ ಆದನ್ನು ನಾಳೆಯೇ ಕೊಡಿಸುತ್ತೇನೆ, ಅವರು ಬೇಕಾದರೆ ಊರಿಗೆ ಹೋಗಿ ಬೇಕಾದವರಿಗೆ ಕೊಡಿಸಲಿ ಎಂದು ಅರಿಕೆಮಾಡಿಕೊಳ್ಳುತ್ತೇನೆ. ಬಹಳ ವಿಷಾದದಿಂದ ವಿಚಾರ ತಿಳಿಸಿದ್ದಾರೆ. ಬಹಳ ಅವಶ್ಯಕವಿದೆ, ಆತುರವಿದೆ, ಹಳ್ಳಿಗಳಲ್ಲಿ ಮನೆಯ ಮುಂದೆ ಜನರಿಗೆ ಕೆಲಸ ಸಿಕ್ಕಬೇಕು ಎಂಬುದನ್ನು ಅತಿಶಕ್ತ ಕ್ರಮ ಕೈಕೊಂಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ಕೆಲಸ ಮತ್ತು ರಸ್ತೆ ಕೆಲಸ ಇವೆರಡನ್ನೂ ಕೈಗೊಳ್ಳಲು ತಿಳಿಸಿದೆ. ರಸ್ತೆ ಕೆಲಸ ಮಾಡಿದರೆ ಊರಿನವರಿಗೆ ಕೆಲಸ ಸಿಕ್ಕುವುದು. ಹತ್ತನೆಯ ತಾರೀಖಿನೊಳಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟಮೇಲೆ ಕಾಂಪ್ರಿಹೆನ್ಸಿವ್ ಆರ್ಡರನ್ನು ಮಾಡಬೇಕು ಎಂದು ಯೋಚನೆಮಾಡಿದ್ದೇವೆ. ಮುಂಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಿನ್ನೆಮೊನ್ನೆ ಮೀಟಿಂಗ್ ನಡೆದು ತೀವ್ರತೆಯನ್ನರಿತು ಬಿಜಾಪುರ ಜಿಲ್ಲೆಯಲ್ಲಿ ಮತ್ತು ಯಾವ ತಾಲ್ಲೂಕಿನಲ್ಲಿ ಕೆಲಸವಿಲ್ಲದೆ ತೊಂದರೆಯಾಗಿದೆಯೋ ಅಲ್ಲಿ ರೂಲ್ಸ್ ಮತ್ತು ಕಾನೂನನ್ನು ತಡೆದು ಕೆಲಸ ಪ್ರಾರಂಭಿಸಬೇಕು ಎಂದು ಹುಕುಂ ಮಾಡಲಾಗಿದೆ. ಈ ದಿವಸವೇ ಬೇಕಾದರೆ ಮಾನ್ಯ ಸದಸ್ಯರ ಕೈಗೆ ಹುಕುಂ ಕೊಡಲಾಗುವುದು.

ಶ್ರೀ ಎಸ್ ವೈ. ಪಾಟೀಲ್.— ನನಗೆ ಇಲ್ಲಿ ಕೆಲಸವಿಲ್ಲ, ಹುಕುಂ ಕಾಪಿ ಕೊಟ್ಟರೆ ಸಾಕು. ನಾನು ಊರಿಗೆ ಹೋಗುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.— ನಿಮಗೆಷ್ಟು ತೀವ್ರತೆಯಿದೆಯೋ ಅಷ್ಟೇ ತೀವ್ರತೆ ಸರಕಾರಕ್ಕೂ ಇದೆ. ಜನರು ಕೆಲವು ಕಡೆ ಬಹಳ ಕಷ್ಟಪಡುತ್ತಿದ್ದಾರೆಂದು ತಿಳಿದು ಮಾನವೀಯತೆ ದೃಷ್ಟಿಯಿಂದ ಜನರಿಗೆ ಕೆಲಸ ದೊರೆಯುವಂಥ ಕೆಲಸಗಳನ್ನು ಪ್ರಾರಂಭಿಸುವಂತೆ ಅಧಿಕಾರಿಗಳಿಗೆ ಹುಕುಂ ಮಾಡಿದ್ದೇವೆ. ಸಾಯಂಕಾಲ ಬೇಕಾದರೆ ಮಾನ್ಯ ಸದಸ್ಯರಿಗೆ ಅದರ ಕಾಪಿ ಕೊಡುತ್ತೇನೆ. ಅವರು ಜೊತೆಯಲ್ಲೇ ತೆಗೆದು ಕೊಂಡು ಹೋಗಬಹುದು. ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಎಷ್ಟು ಜನಕ್ಕೆ ಕೆಲಸ ಬೇಕೋ ಅಷ್ಟು ಜನರಿಗೂ ಕೆಲಸ ಕೊಡಲು ವ್ಯವಸ್ಥೆಮಾಡಿದೆ.

ಶ್ರೀ ಸಿ. ಬೈರೇಗೌಡ.— ಮಾನ್ಯ ಮಂತ್ರಿಗಳು ಹೇಳಿದ್ದನ್ನು ಕೇಳಿ ಬಹಳ ಸಂತೋಷವಾಯಿತು. ಬೆಂಕಿ ಬಿದ್ದಾಗ ಬಾವಿ ತೋಡುವ ಕೆಲಸ ನಡೆಯುತ್ತಿದೆ, ಇದು ಸರಿಯಲ್ಲ. ಜನತೆಗೆ ಶಾಶ್ವತವಾದ ಪರಿಹಾರ ದೊರೆಯುವಂಥ ಕಾರ್ಯಕ್ರಮ ಕೈಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

Notice *re*:— Recruitment of Class IV Emplayees.

ಶ್ರೀ ಎಂ. ಎಸ್. ಕೃಷ್ಣನ್.— ನಾನೊಂದು ಕಾಗದ ಬರೆದಿದ್ದೆ, ಕ್ಲಾಸ್ ಫೋರ್‌ನ ನಾಲ್ಕು ಜನರನ್ನು ರಿಟ್ರೆಂಚ್ ಮಾಡುವ ವಿಚಾರಕ್ಕೆ ಅದು ಸಂಬಂಧಪಟ್ಟಿದೆ, ಮಂತ್ರಿಗಳು ಉತ್ತರ ಕೊಡಬಹುದು. ನಿಧಾನವಾದರೆ ತೊಂದರೆಯಾಗುವುದು, ನಾಳೆ ಅವರು ಮನೆಗೆ ಹೋಗುವರು. ಈಗಾಲೇ ಕ್ರಮ ತೆಗೆದು ಕೊಳ್ಳದಿದ್ದರೆ ತೊಂದರೆಯಾಗುವುದು.

ಅಧ್ಯಕ್ಷರು.—ನನಗೆ ಗೊತ್ತಿದೆ. ನೋಟೀಸನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳಿಸಿದೆ. ಅದು ವಾಪಸು ಬಂದನಂತರ ತಮಗೆ ಮಾತನಾಡಲು ಅವಕಾಶ ಕೊಡಬಹುದು. ನಾನು ಕಳಿಸಿರುವ ಪೇಪರ್ ಬರಲಿ.

Notice *re*:— Irregular Transfer of Teachers.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯ ಪ್ರಸ್ತಾಪಿಸಬೇಕಾಗಿದೆ. ನೀತಿ ನಿಯಮವಿಲ್ಲದೆ ಉಪಾಧ್ಯಾಯರುಗಳನ್ನು ವರ್ಗ ಮಾಡುವ ಬಗ್ಗೆ ಚರ್ಚೆಮಾಡಲು ರೂಲ್ ೫೯ರ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ನಾನು ಕಳಿಸಿದ್ದೆ. ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು. ಸಭೆ ಇನ್ನು ನಾಲ್ಕು ದಿವಸ ನಡೆಯಬಹುದು. ಆ ಅವಧಿಯೊಳಗೆ ಚರ್ಚೆಯಾಗಬೇಕು. ಇದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ತಾವು ಕೊಟ್ಟಿರುವುದನ್ನು ಸರಕಾರಕ್ಕೆ ಕಳಿಸಿದ್ದೇನೆ, ಅದು ಬಂದನಂತರ ವಿಚಾರ ತಿಳಿಸಬಹುದು.

THE MYSORE LEGISLATURE SALARIES BILL 1972

INTRODUCTION

SRI D. K. NAIKAR (Minister for Law and Parliamentary Affairs).- Madam Speaker, I beg to introduce the Mysore Legislature Salaries Bill 1972.

MADAM SPEAKER.—The Bill is introduced*

* the Bill is appended as an Annexaure.